ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

# ಸ್ವಾಭಿಮಾನಿ ಸಹಕಾರಿ

Swabhimani Sahakari


Volume - 12
Issue - 4
Pages - 20
₹ - 12
April - 2014

'ಟುವ್ವಿ ಮಾಗಿಗೆ ಟುವ್ವಿ
ಸುವ್ವಿ ಸುಗ್ಗಿಗೆ ಸುವ್ವಿ'

– ಕುವೆಂಪು
ಶ್ರೀ ರಾಮಾಯಣ ದರ್ಶನಂ




ಶ್ರೀರಾಮನವಮಿ



ಮಹಾವೀರ ಜಯಂತಿ



ಡಾ. ಅಂಬೇಡ್ಕರ್ ಜಯಂತಿ



ಗುಡ್ ಫ್ರೈಡೇ

## ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 2745 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 582

# ಯುವಕರು ಸಹಕಾರಿ ಕ್ಷೇತ್ರದ ಆಶಾಕಿರಣ



"ಯುವಕರು ಭವಿಷ್ಯದಲ್ಲಿ ಈ ದೇಶದ ಹಾಗೂ ಸಹಕಾರಿ ಕ್ಷೇತ್ರದ ನಾಯಕತ್ವದ ಚುಕ್ಕಾಣಿಯನ್ನು ಹಿಡಿಯುವಂತಾಗಲು ಅವರಿಗೆ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯ ಸಂಪೂರ್ಣ ಮಾಹಿತಿ ಒದಗಿಸುವ ಕಾರ್ಯ ಪ್ರಾರಂಭವಾಗಿದೆ. ಸಹಕಾರಿ ಕ್ಷೇತ್ರದ ಬಗ್ಗೆ ಅವರಲ್ಲಿರುವ ನಕಾರಾತ್ಮಕ ವಿಷಯಗಳನ್ನು ತೆಗೆದುಹಾಕಿ ಸಕಾರಾತ್ಮಕ ಚಿಂತನೆಗಳನ್ನು ಬೆಳೆಸುವುದು."

» ಗುರುನಾಥ ಜ್ಯಾಂತಿಕರ
ಅಧ್ಯಕ್ಷರು

ಈ ದೇಶದ ಸಹಕಾರ ಕ್ಷೇತ್ರ 110 ವರ್ಷಗಳ ಸುದೀರ್ಘ ಪಯಣವನ್ನು ಕಂಡಿದೆ. ಅನೇಕ ಏರುಪೇರುಗಳ ನಡುವೆ ಮಹತ್ತರ ಸಾಧನೆಗಳನ್ನು ಮಾಡಿರುವ ಕೀರ್ತಿ ಸಹಕಾರ ಕ್ಷೇತ್ರಕ್ಕೆ ಸಲ್ಲುತ್ತದೆ. ದೇಶದಲ್ಲಿ ಹಸಿರು ಕ್ರಾಂತಿಯ ಹಾಗೂ ಶ್ವೇತ ಕ್ರಾಂತಿಯ ಹರಿಕಾರನಾಗಿ ಕಾರ್ಯನಿರ್ವಹಿಸಿದೆ. ಆಹಾರ ಸ್ವಾವಲಂಬನೆಗೆ ಮಹತ್ತರ ಕಾಣಿಕೆ ನೀಡಿದೆ. ದೇಶದ ರೈತರ ಹಾಗೂ ಸಮಾಜದ ದುರ್ಬಲವರ್ಗದವರ ಆರ್ಥಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸುತ್ತಿದೆ. ಜನರ ಜೀವನ ಪದ್ಧತಿಯಾಗಿ ಬೆಳೆದಿದೆ. ಉತ್ತಮ ಆರ್ಥಿಕ ವ್ಯವಸ್ಥೆಯಾಗಿದೆ. ಬೇರೆ ದೇಶಗಳಿಗಿಂತ ವಿಭಿನ್ನವಾಗಿ ಬೃಹದಾಕಾರವಾಗಿ ಮಾದರಿಯಾಗಿ ಬೆಳೆದಿದೆ. ದೇಶದ ಅನೇಕ ಯೋಜನೆಗಳನ್ನು ಜಾರಿಮಾಡುವ ಏಕಮಾರ್ಗ ಇದಾಗಿದೆ. ಇದಕ್ಕೆ ಪರ್ಯಾಯ ಅರ್ಥವ್ಯವಸ್ಥೆ ಇನ್ನೂ ಅವಿಷ್ಕಾರವಾಗಿಲ್ಲ.

ಆದರೆ ಈ ಸಹಕಾರ ಚಳುವಳಿಯ ಕಾರ್ಯಾಚರಣೆಯಲ್ಲಿ ಕೆಲವು ಮಾರ್ಪಾಡುಗಳು ಅಗತ್ಯವೆನಿಸುತ್ತದೆ. ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಆಡಳಿತದಲ್ಲಿ ವೃತ್ತಿಪರತೆಯ ಕೊರತೆ ಎದ್ದುಕಾಣುತ್ತಿದೆ. ಸಾಂಪ್ರದಾಯಿಕತೆಗೆ ಅಂಟಿಕೊಳ್ಳುವ ಪ್ರವೃತ್ತಿಯಿಂದ ಹೊರಬಂದು ಆಧುನಿಕತೆ ಹಾಗೂ ಮಾಹಿತಿ ತಂತ್ರಜ್ಞಾನದ ಬಳಕೆಗೆ ಆದ್ಯತೆ ಅವಶ್ಯಕತೆಯಿದೆ. ಪಟ್ಟಭದ್ರ ಹಿತಾಸಕ್ತಿಗಳ ಬಿಗಿಹಿಡಿತದಿಂದ ಹೊರಬರಬೇಕಿದೆ. ಇವೆಲ್ಲವುಗಳ ಅಗತ್ಯತೆಯನ್ನು ಪೂರೈಸಬಲ್ಲ ಸದಸ್ಯರು ಹಾಗೂ ಆಡಳಿತಮಂಡಲಿಯು ಸಹಕಾರ ಕ್ಷೇತ್ರದ ಚುಕ್ಕಾಣಿಯನ್ನು ಹಿಡಿಯಬೇಕಿದೆ. ಇದಕ್ಕಾಗಿ ಯುವಜನತೆಯನ್ನು ಈ ಕ್ಷೇತ್ರದಲ್ಲಿ ಬರಮಾಡಿಕೊಳ್ಳುವ ಪ್ರಯತ್ನವನ್ನು ಸಹಕಾರಿ ವ್ಯವಸ್ಥೆಯು ಹಮ್ಮಿಕೊಳ್ಳಬೇಕಿದೆ. ಪ್ರತಿಯೊಂದು ಸಹಕಾರ ಸಂಸ್ಥೆಗಳಲ್ಲಿ ಯುವಕರಿಗೆ ಅವಕಾಶ ಒದಗಿಸುವ ವ್ಯವಸ್ಥೆಯು ಸಮರೋಪಾದಿಯಲ್ಲಿ ನಡೆಯಬೇಕು. ಇದಕ್ಕಾಗಿಯೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಪ್ರತಿಯೊಂದು ವಿಶ್ವವಿದ್ಯಾಲಯಗಳಲ್ಲಿ ಈ ವರ್ಷದಿಂದಲೇ ವಿನೂತನ ಕಾರ್ಯಕ್ರಮವನ್ನು "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಪ್ರಾರಂಭಿಸಿದೆ. ಮೈಸೂರು ಹಾಗೂ ಗುಲ್ಬರ್ಗಾ ವಿಶ್ವವಿದ್ಯಾಲಯಗಳಿಂದ ಈ ಪ್ರಾರಂಭಮಾಡಲಾಗಿದೆ. ಈ ಎರಡೂ ಕಾರ್ಯಕ್ರಮಗಳಲ್ಲಿ ಒಟ್ಟಾರೆ 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 100 ಕ್ಕೂ ಹೆಚ್ಚು ಸ್ಥಳಿಯ ಸಹಕಾರ ಸಂಸ್ಥೆಗಳ ಪ್ರತಿನಿಧಿಗಳು ಅನೇಕ ಗಣ್ಯರು ಭಾಗವಹಿಸಿ ಪ್ರಯೋಜನ ಪಡೆದದ್ದು ವಿಶೇಷ. ಯುವಕರ ಉತ್ಸಾಹ ಮೆಚ್ಚುವಂತಹದ್ದು. ಕಾರ್ಯಕ್ರಮದ ಬಗ್ಗೆ ಪ್ರಶಂಸೆಯ ಮಾತುಗಳು ಕೇಳಿಬಂದಿವೆ.ಕಾರ್ಯಕ್ರಮದ ಸಫಲತೆಗೆ ಸಂಯುಕ್ತ ಸಹಕಾರಿ ಹೆಮ್ಮೆಪಡುವಂತಾಯಿತು. ಎರಡೂ ವಿಶ್ವವಿದ್ಯಾಲಯದ ಪದಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿರುವುದು ಸ್ವಾಗತಾರ್ಹ.

ಯುವಕರು ಭವಿಷ್ಯದಲ್ಲಿ ಈ ದೇಶದ ಹಾಗೂ ಸಹಕಾರಿ ಕ್ಷೇತ್ರದ ನಾಯಕತ್ವದ ಚುಕ್ಕಾಣಿಯನ್ನು ಹಿಡಿಯುವಂತಾಗಲು ಅವರಿಗೆ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಯ ಸಂಪೂರ್ಣ ಮಾಹಿತಿ ಒದಗಿಸುವ ಕಾರ್ಯ ಪ್ರಾರಂಭವಾಗಿದೆ. ಸಹಕಾರಿ ಕ್ಷೇತ್ರದ ಬಗ್ಗೆ ಅವರಲ್ಲಿರುವ ನಕಾರಾತ್ಮಕ ವಿಷಯಗಳನ್ನು ತೆಗೆದುಹಾಕಿ ಸಕಾರಾತ್ಮಕ ಚಿಂತನೆಗಳನ್ನು ಬೆಳೆಸುವುದು. ಸಹಕಾರ ಕ್ಷೇತ್ರವನ್ನು ಯುವಕರು ಹೇಗೆ ಉಪಯೋಗಿಸಿಕೊಳ್ಳಬಹುದು ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಅವರುಗಳು ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕಲು ತಿಳುವಳಿಕೆ ನೀಡುವುದು. ಸಾಧನೆಗಳ ಬಗ್ಗೆ ಸವಾಲುಗಳ ಬಗ್ಗೆ ಅರಿವುಮೂಡಿಸುವುದು ಮತ್ತು ಈ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಯುವಕರ ಪಾತ್ರದ ಮಾಹಿತಿ ನೀಡುವುದರಲ್ಲಿ ಸಂಯುಕ್ತ ಸಹಕಾರಿಯು ಪ್ರಯತ್ನವನ್ನು ಸಹಕಾರಿಗಳು ಪ್ರೋತ್ಸಾಹಿಸುವಿರಾಗಿ ಆಶಿಸಲಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಈಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ ಸಂಯುಕ್ತ ಸಹಕಾರಿಯು ಉದ್ದೇಶಿಸಿದೆ. ಈ ಬಗ್ಗೆ ತಮ್ಮ ಸಲಹೆ, ಸಹಕಾರ ಹಾಗೂ ಮಾರ್ಗದರ್ಶನಗಳನ್ನು ಅಪೇಕ್ಷಿಸಲಾಗಿದೆ.

## ಒಳ ಪುಟಗಳಲ್ಲಿ . . .

ಸಹಕಾರಿಗಳಾಗಲು ಯುವಕರಿಗೆ ಗುರುನಾಥ ಜ್ಯಾಂತಿಕರ ಕರೆ ........... 4

ಕ್ರೆಡಿಟ್ ಸಹಕಾರಿ ಸಂಘ; ಸಹಕಾರಿ ಬ್ಯಾಂಕ್ ಅಲ್ಲ – ಆದಾಯ ತೆರಿಗೆ ಕಾಯ್ದೆ ಅನ್ವಯಿಸದು ........ 5

ಕಾರ್ಯಕ್ಷಮತೆ ತರಬೇತಿಯಿಂದ ಸಿಬ್ಬಂದಿಯವರ ಕಾರ್ಯನಿರ್ವಹಣೆಯಲ್ಲಿ ಶಿಸ್ತು ಹಾಗೂ ಕ್ರಿಯಾಶೀಲತೆ ಬೆಳೆಯುತ್ತದೆ – ಶ್ರೀ ಬಿ.ಎ.ಮಹದೇವಪ್ಪ ................ 6

ಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಗಳು ಸಹಕಾರಿಯಾಗಲಿ ....... 7

ಪದಾಧಿಕಾರಿಗಳ ಆಯ್ಕೆ ........ 8

ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಸಹಕಾರ ವಿಷಯ ಪ್ರಾರಂಭಿಸಲು ಕ್ರಮ – ಕುಲಪತಿ ಡಾ. ಈ.ಟಿ.ಪುಟ್ಟಯ್ಯ ........ 10

ಸಂವಾದ ಕಾರ್ಯಕ್ರಮ ........ 11

ಆಡಳಿತದಲ್ಲಿ ವೃತ್ತಿ ಕೌಶಲ್ಯ ........ 12

2013–14ನೇ ಸಾಲಿನ ಅಂತ್ಯಕ್ಕೆ ಸೌಹಾರ್ದ ಸಹಕಾರಿಗಳ ಹಣಕಾಸಿನ ವಿವರಗಳು........13

ಭಾರತದ ಅರ್ಥವ್ಯವಸ್ಥೆಯಲ್ಲಿ ಸಹಕಾರಕ್ಕೆ ಪ್ರಮುಖ ಸ್ಥಾನ ಗ್ರಾಮೀಣ ಸಹಕಾರಿ ಸಾಲ ವಿತರಣಾ ವ್ಯವಸ್ಥೆ – ಬಲಪಡಿಸುವಿಕೆ ಮತ್ತು ಪುನಶ್ಚೇತನ ಡಾ. ದೀಪಾಲಿ ಪಂಥ್ ಜೋಷಿ, ಕಾರ್ಯನಿರ್ವಾಹಕ ನಿರ್ದೇಶಕರು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ........ 14

ಗೆಲ್ಲುವ, ಗೆಲ್ಲಿಸುವ ದಾರಿಯ ಅನ್ವೇಷಣೆ ........ 16

ವೆಬ್‌ಸೈಟ್ ಪರಿಚಯ ಮಾಲಿಕೆ – 20 ........ 17

ವಿಶೇಷ ಲೇಖನ ........ 18

ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಾಹಕರು ಯಶಸ್ವಿಕಾರ್ಯ ನಿರ್ವಾಹಕರಾಗಲು ಮಾರ್ಗಸೂಚಿ ........ 19

ಇವರಿಂದ ಪ್ರಕಟಿತ :
**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 10.
web : www.souharda.coop, E-mail : souharda@souharda.coop,
**ದೂ.ಸಂ :** 23378375/76/77/78/79/80 & 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ.ಪಾಟೀಲ**
ಸಂಚಿಕೆ ಸಿದ್ಧತೆ : **ವಿ.ಜಿ. ಕಾರಕೂನ**
ಮುದ್ರಣ : **ವರ್ಣ ಕಮ್ಯುನಿಕೇಷನ್ಸ್**, ಬೆಂಗಳೂರು.

# ಸಂಪಾದಕೀಯ

## ವಾರ್ಷಿಕ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನೆ

ಆರ್ಥಿಕ ವರ್ಷ2013–2014 ಮುಕ್ತಾಯವಾಗಿದೆ. ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳ ವಾರ್ಷಿಕ ಲೆಕ್ಕಪತ್ರಗಳು ಅಂತಿಮಗೊಂಡಿವೆ. ಲೆಕ್ಕಪರಿಶೋಧನೆಗಾಗಿ ಸಿದ್ಧತೆಯನ್ನು ಮಾಡಿಕೊಳ್ಳಬೇಕಿದೆ. ಅಂತಿಮಗೊಂಡ ವಾರ್ಷಿಕ ಲೆಕ್ಕಪತ್ರಗಳನ್ನು ಆಡಳಿತ ಮಂಡಳಿಗೆ ಮಂಡಿಸಿ ಅನುಮೋದನೆ ಪಡೆದು ಏಪ್ರಿಲ್ 30 ರೊಳಗಾಗಿ ಸಲ್ಲಿಸಲು ಸಾಮಾನ್ಯ ಸಭೆಯಲ್ಲಿ ನೇಮಕವಾಗಿರುವ ಲೆಕ್ಕಪರಿಶೋಧಕರನ್ನು ಸಂಪರ್ಕಿಸಿ ಲೆಕ್ಕಪರಿಶೋಧನೆಯ ಕಾರ್ಯ ಮಾಡಬೇಕಿದೆ. ಲೆಕ್ಕಪರಿಶೋಧನೆಯ ಕಾರ್ಯ ಸೆಪ್ಟಂಬರ್ 1ನೇ ತಾರೀಖಿನ ಒಳಗಾಗಿ ಮುಗಿಯಬೇಕು. ಆಡಿಟ್ ಆದ ಲೆಕ್ಕಪತ್ರಗಳನ್ನು, ವರದಿಯನ್ನು ಆಡಳಿತ ಮಂಡಳಿಯಲ್ಲಿ ಮಂಡಿಸಿ ಲೆಕ್ಕಪರಿಶೋಧನಾ ಆಕ್ಷೇಪಗಳಿಗೆ ಸಮಜಾಯಿಷಿಗಳನ್ನು ಸಿದ್ಧಪಡಿಸಿ ವಾರ್ಷಿಕ ಸಾಮಾನ್ಯ ಸಭೆಗೆ ಅನುಮೋದನೆಗಾಗಿ ಮಂಡಿಸುವಂತಾಗಬೇಕು. ವಾರ್ಷಿಕ ಸಾಮಾನ್ಯ ಸಭೆ ಸೆಪ್ಟೆಂಬರ್ 25ರ ಒಳಗಾಗಿ ನಡೆಯಲೇಬೇಕು. ಈ ಬಗ್ಗೆ ಮುಖ್ಯಕಾರ್ಯ ನಿರ್ವಾಹಕರು ಕಾರ್ಯನಿರತರಾಗುವುದು ಅತ್ಯಂತ ಅವಶ್ಯಕ.

97ನೇ ಸಂವಿಧಾನ ತಿದ್ದುಪಡಿಯನಂತರ ಸೌಹಾರ್ದ ಸಹಕಾರಿ ಕಾಯ್ದೆಗೆ 2013ರಲ್ಲಿ ತಿದ್ದುಪಡಿ ತರಲಾಗಿದೆ. ಈ ಕಾಯ್ದೆಯ ಅಧ್ಯಾಯ 5 ಕಲಂ 32 ರಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ಹಾಗೂ ಲೆಕ್ಕಪತ್ರಗಳನ್ನು ಇಡಬೇಕಾಗುತ್ತದೆ. ಹಾಗು 33 ರನ್ವಯ ಲೆಕ್ಕಪರಿಶೋಧನೆಯನ್ನು ಮಾಡಿಸುವುದು ಅಗತ್ಯ. ವರ್ಷ ಮುಕ್ತಾಯವಾದ ಒಂದು ತಿಂಗಳೊಳಗಾಗಿ ಸಹಕಾರ ಲೆಕ್ಕಪರಿಶೋಧಕರ ನಿರ್ದೇಶಕರು ಇಲಾಖೆಯು ನೀಡಿರುವ ವೆಬ್ ಸೈಟ್‌ನಲ್ಲಿ ಲೆಕ್ಕಪರಿಶೋಧಕರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಪ್ರತಿಯೊಂದು ಸಹಕಾರಿಯು ಈ ಪಟ್ಟಿಯಲ್ಲಿ ಇರುವ ಒಬ್ಬ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡು ಸದರಿಯವರಿಂದ ಲೆಕ್ಕಪರಿಶೋಧನೆ ಮಾಡಿಸುವ ಕ್ರಮ ಇಡುವುದು ಅಗತ್ಯ.

ಪ್ರತಿಯೊಂದು ಸೌಹಾರ್ದ ಸಹಕಾರಿಯು ಗಮನಿಸಬೇಕಾದ ಅಂಶವೆಂದರೆ ಈ ಮೊದಲು ಲೆಕ್ಕಪರಿಶೋಧಕೆ ಪಟ್ಟಿಯನ್ನು ಸಂಯುಕ್ತ ಸಹಕಾರಿಯು ನಿರ್ವಹಿಸುತ್ತಿತ್ತು. ಈ ತಿದ್ದುಪಡಿಗಳು ಜಾರಿಗೆ ಬಂದನಂತರ ಸಹಕಾರಿ ಲೆಕ್ಕಪರಿಶೋಧನಾ ನಿರ್ದೇಶಕರು ನಿರ್ವಹಿಸುತ್ತಾರೆ. ಅವರು ಲೆಕ್ಕಪರಿಶೋಧಕರ ಪಟ್ಟಿಯನ್ನು ನಿರ್ವಹಿಸುತ್ತಾರೆ. ■

## ಯುವಜನ ಹಾಗೂ ಸಹಕಾರ ಸಂವಾದ ಕಾರ್ಯಕ್ರಮ :

# ಸಹಕಾರಿಗಳಾಗಲು ಯುವಕರಿಗೆ ಗುರುನಾಥ ಜ್ಯಾಂತಿಕರ ಕರೆ



ಸಂವಾದ ಕಾರ್ಯಕ್ರಮದ ಉದ್ಘಾಟನೆ ಸಂಯುಕ್ತ ಸಹಕಾರಿಯ ಅಧ್ಯಕ್ಷರು ಮಾನ್ಯ ಶ್ರೀ ಗುರುನಾಥಜ್ಯಾಂತಿಕರ್ ಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರು ಶ್ರೀ ಬಸವರಾಜ್, ಸಹಕಾರ ಸಂಘಗಳ ಜಂಡಟಿ ನಿಬಂಧಕರಾದ ಶ್ರೀಮತಿ ಕೆ.ಎಂ ಆಶಾ, ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದ ಮುಖ್ಯಸ್ಥರಾದ ಪ್ರೋ.ಡಿ.ಎಸ್. ಲೀಲಾವತಿ, ಪ್ರೋ. ಎ.ಆರ್. ವಿಶ್ವನಾಥ್, ಡಾ॥ ಸಿದ್ಧಾಂತಿ, ಶ್ರೀ ಸಿ.ಎನ್. ಪರಶಿವಮೂರ್ತಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಮತ್ತಿತರರು ಇದ್ದಾರೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಹಾಗು ಸಹಕಾರ ವಿಭಾಗ ಜಂಟಿಯಾಗಿ ಹಮ್ಮಿಕೊಂಡ ಯುವಜನ ಹಾಗೂ ಸಹಕಾರ ಸಂವಾದ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥಜಾಂತಿಕರರವರು ಈ ದೇಶದ ಸಹಕಾರಿ ಚಳುವಳಿಗೆ 110 ವರ್ಷಗಳ ಸುದೀರ್ಘ ಇತಿಹಾಸವಿದೆ. ಸಹಕಾರ ಕ್ಷೇತ್ರ ಈ ದೇಶದ ಗ್ರಾಮೀಣ ಜನರ, ಸಮಾಜದ ಹಿಂದುಳಿದ ವರ್ಗದವರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ದೇಶದಲ್ಲಿ 6 ಲಕ್ಷ ಸಹಕಾರ ಸಂಸ್ಥೆಗಳಿವೆ. 30 ಕೋಟಿ ಸದಸ್ಯರಿದ್ದಾರೆ. 33.71 ಸಾವಿರಕೋಟಿ ಶೇರು ಬಂಡವಾಳವಿದೆ. 59.74 ಸಾವಿರಕೋಟಿ ದುಡಿಯುವ ಬಂಡವಾಳವಿದೆ. 10 ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದೆ. ಮಹಿಳೆಯರಿಗೆ ಹಾಗೂ ಯುವಕರಿಗೆ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಈ ಕ್ಷೇತ್ರದಲ್ಲಿ ಸಾಕಷ್ಟು ಅವಕಾಶಗಳಿವೆ. ಆದ್ದರಿಂದ ಯುವಕರು ಈ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಧ್ಯಯನ ಮಾಡಿ ಈ ಕ್ಷೇತ್ರದಲ್ಲಿ ತೊಡಗಿಸಿ ಕೊಳ್ಳಲು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಶ್ರೀ ಬಸವರಾಜರವರು ಮಾತನಾಡಿ ಸಹಕಾರ ಸಂಸ್ಥೆಗಳು ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವುದನ್ನು ನಾವು ನೋಡ್ತಾ ಇದ್ದೇವೆ. ಸಮಾಜದ ಅಬಿವೃದ್ಧಿಗಾಗಿ ನಿರ್ವಹಿಸುತ್ತಿರುವ ಸಮಾಜದ ಪರಿವರ್ತನೆಗಾಗಿ ಪ್ರಯತ್ನಿಸುತ್ತಿವೆ. ಯುವಕರಿಗೆ ಈ ಬಗ್ಗೆ ಮಾಹಿತಿ ನೀಡಿ ಅವರನ್ನು ಈ ಕ್ಷೇತ್ರದೆಡೆಗೆ ಕರೆತರುವ ಸಂಯುಕ್ತ ಸಹಕಾರಿಯ ಪ್ರಯತ್ನ ಶ್ಲಾಘನೀಯ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾಲಯದ ಕಲಾ ವಿಭಾಗದ ವಿಭಾಗದ ವಿದ್ಯಾರ್ಥಿನಿಯರಿಂದ ನಾಡಗೀತೆಯಾದ ನಂತರ ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ.ವಿಶ್ವನಾಥ ಎ.ಆರ್.ಸ್ವಾಗತಮಾಡಿದರು. ನಂತರ ಅವರು ಮಾತನಾಡಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಕಳೆದ 30 ವರ್ಷಗಳಿಂದ ಸಹಕಾರ ವಿಷಯವನ್ನು ಭೋಧಿಸಲಾಗುತ್ತಿದೆ, ಅನೇಕರು ಈ ವಿಷಯದ ಬಗ್ಗೆ ಅಧ್ಯಯನಮಾಡಿ ಡಾಕ್ಟ್ರೇಟ್ ಪದವಿಕೂಡ ಪಡೆದಿದ್ದಾರೆ. ಆದರೆ ಈ ವಿಷಯದಲ್ಲಿ ಪದವಿ ಪಡೆದವರಿಗೆ ಹಾಗೂ ಸ್ನಾತಕೋತ್ತರ ಪದವಿ ಪಡೆದವರಿಗೆ ಉದ್ಯೋಗ ನೀಡಲು ಸರ್ಕಾರ ಕೆಲವು ಮೀಸಲಾತಿ ವ್ಯವಸ್ಥೆಯನ್ನು ಮಾಡುವುದು





ಅಗತ್ಯ. ಈ ಬಗ್ಗೆ ಅನೇಕ ವರ್ಷಗಳಿಂದಲೂ ಮನವಿ ಸಲ್ಲಿಸಲಾಗುತ್ತಿದೆ. ಇನ್ನೂ ಸೂಕ್ತ ವ್ಯವಸ್ಥೆಯಾಗಿಲ್ಲದಿರುವುದರಿಂದ ಈ ವಿಷಯ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಮನವಿ ಸಲ್ಲಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿ ಸಹಕಾರ ಕ್ಷೇತ್ರದ ಮೂಲಕ ಯುವಕರಿಗೆ ಹೆಚ್ಚಿನ ಪ್ರಯೋಜನವಿದೆ. ಸಹಕಾರ ಕ್ಷೇತ್ರದಲ್ಲಿ ಪಾರದರ್ಶಕ ಹಾಗೂ ವೃತ್ತಿಕೃತ ಆಡಳಿತದ ಅಗತ್ಯತೆ ಇದೆ. ಸಾಂಪ್ರದಾಯಿಕ ವ್ಯವಸ್ಥೆಯಿಂದ ಹೊರಬಂದು ಆಧುನಿಕತೆ ಹಾಗೂ ಮಾಹಿತಿ ತಂತ್ರಜ್ಞಾನದ ಅಳವಡಿಕೆಯ ಅಗತ್ಯತೆ ಇದೆ ಇದನ್ನು ಯುವಜನಾಂಗ ಪೂರೈಸಬಲ್ಲದು ಮತ್ತು ಸಹಕಾರಿ ಕ್ಷೇತ್ರವನ್ನು ಯಶಸ್ವಿಯಾಗಿ ಅಭಿವೃದ್ಧಿಯತ್ತ ಸಾಗಿಸಬಲ್ಲದು ಎಂಬ ನಂಬಿಕೆ ಇದೆ.

ಅದಕ್ಕಾಗಿಯೇ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯವರು ಈ ಸಂವಾದ ಕಾರ್ಯಕ್ರಮವನ್ನು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಹಮ್ಮಿಕೊಳ್ಳಲು ಮುಂದಾಗಿದೆ. ಇದು ಮೊದಲನೆಯ ಕಾರ್ಯಕ್ರಮ. ಬೇರೆಲ್ಲ ವಿಶ್ವವಿದ್ಯಾಲಯಗಳಿಗೆ ಈ ಕಾರ್ಯಕ್ರಮ ಮಾದರಿಯಾಗಬೇಕು ಎಂದು ತಿಳಿಸಿದರು. ವೇದಿಕೆಯಲ್ಲಿ ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಡಿ.ಎಸ್.ಲೀಲಾವತಿ, ಪ್ರೊ. ಎಸ್. ಮಹೇಂದ್ರಕುಮಾರ, ಪ್ರೊ. ವಿಶ್ವನಾಥ ಎ.ಆರ್., ಮೈಸೂರು ಸಹಕಾರ ವಿಭಾಗದ ಜಂಟಿ ನಿಬಂಧಕರಾದ ಶ್ರೀ ಕೆ.ಎಮ್. ಆಶಾ, ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಶಶಿಧರ, ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ದಿನೇಶ ಗುಪ್ತಾ ಮುಂತಾದವರು ಉಪಸ್ಥಿತರಿದ್ದರು.

**ಪ್ರಧಾನ ವಿಷಯಮಂಡನೆ :** ಡಾ.ಎಸ್.ಎ.ಸಿದ್ಧಾಂತಿ ನಿರ್ದೇಶಕರು ಎಮ್.ಬಿ.ಎ.ವಿಭಾಗ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ ಬೆಂಗಳೂರು ಅವರು ಸಹಕಾರ ಚಳುವಳಿಯ ಸಾಧನೆಗಳು – ಸವಾಲುಗಳು – ಅವಕಾಶಗಳು ಹಾಗೂ ಯುವಜನತೆಯ ಪಾತ್ರ ಎಂಬ ಬಗ್ಗೆ ಪ್ರಧಾನ ಉಪನ್ಯಾಸ ನೀಡಿದರು.

**ಸಂವಾದ ಕಾರ್ಯಕ್ರಮ :** ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಸಂವಾದಕಾರರಾಗಿ ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ. ಡಿ.ಎಸ್.ಲೀಲಾವತಿ, ಸಂಪನ್ಮೂಲ ವ್ಯಕ್ತಿಗಳಾಗಿ ಸಹಕಾರ ಇಲಾಖೆಯ ನಿವೃತ್ತ ಅಪರ ನಿಬಂಧಕರಾದ ಶ್ರೀ ಸಿ.ಎನ್.ಪರಶಿವಮೂರ್ತಿ, ಡಾ.ರೇಣುಕಾರ್ಯ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ, ಜಂಟಿನಿಬಂಧಕರಾದ ಶ್ರೀಮತಿ ಕೆ.ಎಮ್.ಆಶಾ, ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಮಹೇಶ್ಚಂದ್ರಗುರು, ಪ್ರೊ ಎಸ್. ಮಹೇಂದ್ರಕುಮಾರ, ಪ್ರೊ ವಿಶ್ವನಾಥ.ಎ.ಆರ್, ಮೈಸೂರು ಮಹಿಳಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರಿಮತಿ ಬೃಹದಾಂಬ ಹಾಗೂ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲ್ ಸಂವಾದ ಕಾರ್ಯಕ್ರಮದ ವಂದನಾರ್ಪಣೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ದಿನೇಶ ಗುಪ್ತಾ ನೆರವೇರಿಸಿದರು.

ಮೈಸೂರು ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದ ಮತ್ತು ಇತರೆ ಎಲ್ಲ ವಿಭಾಗಗಳು ಸೇರಿ 150ಕ್ಕೂ ಹೆಚ್ಚು ವಿದ್ಯಾರ್ಥಿ ವಿದ್ಯಾರ್ಥಿನಿಯರು ಮೈಸೂರು ನಗರದ ವಿವಿಧ ಸಹಕಾರ ಸಂಸ್ಥೆಗಳ ಅನೇಕ ಪ್ರತಿನಿಧಿಗಳು ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮ ವಿನೂತನವಾಗಿದ್ದು ಯುವಕರಿಗೆ ಹಾಗೂ ಮಹಿಳೆಯರಿಗೆ ಬಹಳ ಪ್ರಯೋಜನಕಾರಿಯಾಗಿತ್ತು ಎಂದು ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

■

## ಕ್ರೆಡಿಟ್ ಸಹಕಾರಿ ಸಂಘ; ಸಹಕಾರಿ ಬ್ಯಾಂಕ್ ಅಲ್ಲ – ಆದಾಯ ತೆರಿಗೆ ಕಾಯ್ದೆ ಅನ್ವಯಿಸದು

### ಶ್ರೀ ಬಿಳೂರು ಗುರುಬಸವ ಪತ್ತಿನ ಸಹಕಾರಿ ಸಂಘದ ಬಗ್ಗೆ ಧಾರವಾಡ ಶ್ರೇಷ್ಠ ನ್ಯಾಯಾಲಯದ ತೀರ್ಪು

ಬಾಗಲಕೋಟೆ ಜಿಲ್ಲೆಯ ಶ್ರೀ ಬಿಳೂರು ಗುರುಬಸವ ಪತ್ತಿನ ಸಹಕಾರಿ ಸಂಘಕ್ಕೆ ಆದಾಯ ತೆರಿಗೆ ಇಲಾಖೆಯವರು 2007–08 ನೇ ಸಾಲಿಗೆ ಬಾಗಲಕೋಟೆಯ ಆದಾಯ ತೆರಿಗೆ ಇಲಾಖೆಯವರು 2,04,03,878 ಆದಾಯ ತೆರಿಗೆ ಪಾವತಿಸುವಂತೆ ನೀಡಿದ ಆದೇಶದ ಮೇಲೆ ಸಹಕಾರ ಸಂಸ್ಥೆಯವರು ಕರ್ನಾಟಕ ಶ್ರೇಷ್ಠ ನ್ಯಾಯಾಲಯವು ಶ್ರೀ ಬಿಳೂರು ಗುರುಬಸವ ಪತ್ತಿನ ಸಹಕಾರಿ ಸಂಘವು ಬ್ಯಾಂಕಿಂಗ ರೆಗ್ಯುಲೇಶನ್ ಕಾಯ್ದೆ ಪ್ರಕಾರ ನೊಂದಣೆಯಾಗಿರುವುದಿಲ್ಲ. ತನ್ನ ಸದಸ್ಯರಿಗೆ ಸಾಲ ಸೌಲಭ್ಯ ಒದಗಿಸುವ ಕ್ರೆಡಿಟ್ ಸಹಕಾರ ಸಂಘವಾಗಿರುವುದರಿಂದ ತೆರಿಗೆ ಕಾಯ್ದೆ ಅನ್ವಯಿಸುವುದಿಲ್ಲ ಎಂದು ತೀರ್ಪು ನೀಡಿದೆ.



# ಕಾರ್ಯಕ್ಷಮತೆ ತರಬೇತಿಯಿಂದ ಸಿಬ್ಬಂದಿಯವರ ಕಾರ್ಯನಿರ್ವಹಣೆಯಲ್ಲಿ ಶಿಸ್ತು ಹಾಗೂ ಕ್ರೀಯಾಶೀಲತೆ ಬೆಳೆಯುತ್ತದೆ – ಶ್ರೀ ಬಿ.ಎ.ಮಹದೇವಪ್ಪ



ಸಂಯುಕ್ತ ಸಹಕಾರಿಯ ಸಿಬ್ಬಂದಿಗಳಿಗೆ ದಿನಾಂಕ 8,9 ಮಾರ್ಚ್ 2014 ರಂದು ದೊಡ್ಡಬಳ್ಳಾಪುರದ ಸಮೀಪದ ಗ್ರೀನ್ ವ್ಯಾಲಿಯಲ್ಲಿ ಎರಡು ದಿನಗಳ ಕಾರ್ಯಕ್ಷಮತೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕ ಹಾಗೂ ಪ್ರಸ್ತುತ ಸನ್ಮತಿ ಫೌಂಡೇಶನ್ ಶಿವಮೊಗ್ಗ ಸಹಕಾರಿ ತರಬೇತಿ ಸಂಸ್ಥೆಯ ಸಂಸ್ಥಾಪಕ ಶ್ರೀ ಬಿ.ಎ.ಮಹದೇವಪ್ಪನವರು ಪ್ರತಿಯೊಬ್ಬ ಸಿಬ್ಬಂದಿಯವರಿಗೂ ತರಬೇತಿ ಅಗತ್ಯ. ನಿರಂತರ ತರಬೇತಿ ಕಾರ್ಯವನ್ನು ವ್ಯವಸ್ಥೆ ಮಾಡುತ್ತಲೆ ಇರಬೇಕು ಹಾಗಾದಲ್ಲಿ ಮಾತ್ರ ಸಿಬ್ಬಂದಿಯವರ ಕಾರ್ಯನಿರ್ವಹಣೆಯಲ್ಲಿ ಶಿಸ್ತು ಹಾಗು ಕ್ರೀಯಾ ಶೀಲತೆ ಬೆಳೆಯುತ್ತದೆ. ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಂಟಿನಿಬಂಧಕ ಹಾಗೂ ಮೈಸೂರು ಐ.ಟಿ.ಐ. ಸಂಸ್ಥೆಯ ಉಪನ್ಯಾಸಕ ಶ್ರೀ ಸಿ.ದಿವಾಕರ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲ್ ಅವರು ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರರವರು ವಂದನಾ ರ್ಪಣೆ ಮಾಡಿದರು. ಕಚೇರಿ ಆಡಳಿತ ನಿರ್ವಹಣೆ, ಕಡತಗಳ ನಿರ್ವಹಣೆ ಬಗ್ಗೆ ಶ್ರೀ ಸಿ.ದಿವಾಕರ, ವೃತ್ತಿ ಕೌಶಲ್ಯತೆ ಬಗ್ಗೆ ಶ್ರೀ ಬಿ.ಎ.ಮಹದೇವಪ್ಪನವರು ಹಾಗೂ ವ್ಯಕ್ತಿತ್ವ ವಿಕಸನದ ಬಗ್ಗೆ ಡಾ.ಸುದರ್ಶನ ರವರು ಉಪನ್ಯಾಸ ನೀಡಿದರು.

## ಸಿಬ್ಬಂದಿಗಳು ಕಾರ್ಯತತ್ಪರತೆ ಬೆಳೆಸಿ ಕೊಳ್ಳುವುದರಿಂದ ಕಾರ್ಯಕ್ಷಮತೆ ಹೆಚ್ಚುತ್ತದೆ - ಶ್ರೀ ಗುರುನಾಥ ಜಾಂತಿಕರ

ಸಂಯುಕ್ತ ಸಹಕಾರಿಯ ಸಿಬ್ಬಂದಿಯವರ ತರಬೇತಿ ಕಾರ್ಯಕ್ರಮ ದಲ್ಲಿ ಭಾಗವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರರವರು ಸಂಯುಕ್ತ ಸಹಕಾರಿಯ ಸಿಬ್ಬಂದಿಯ ವರೊಡನೆ ಸಮಾಲೋಚನೆ ನಡೆಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಆಶಯ, ಸಂಯುಕ್ತ ಸಹಕಾರಿಯ ಕಾರ್ಯ ಚಟುವಟಿಕೆಗಳ ಬಗ್ಗೆ, ಸಂಯುಕ್ತ ಸಹಕಾರಿಯು ಇತರೆ ಮಹಾಮಂಡಳಗಳಿಗಿಂತ ಹೇಗೆ ಭಿನ್ನವಾಗಿದೆ, ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ತಿಳಿದಿರಲೇಬೇಕಾದ ಕೆಲವು ಪ್ರಮುಖ ವಿಷಯಗಳು ಈ ಎಲ್ಲ ವಿಷಯಗಳ ಬಗ್ಗೆ ನಿರಂತರ ಮಾಹಿತಿ ಪಡೆಯುತ್ತಲೇ ಇರಬೇಕು ಹಾಗಾದಲ್ಲಿ ಮಾತ್ರ ಕಾರ್ಯಕ್ಷಮತೆ ಹೆಚ್ಚುತ್ತದೆ ಎಂದು ಹೇಳಿದರು.

## ವಿಶ್ವ ಮಹಿಳಾ ಸಾಧಕರಿಂದ ಸ್ಫೂರ್ತಿ ಪಡೆದು ಕಾರ್ಯನಿರತರಾಗುವ ದಿನ : ನಾಗೇಂದ್ರ ಗುಪ್ತ



ಮಾರ್ಚ 8 ರಂದು ವಿಶ್ವಮಹಿಳಾ ದಿನಾಚರಣೆಯನ್ನು ಸಂಯುಕ್ತ ಸಹಕಾರಿಯ ಸಿಬ್ಬಂದಿಯವರು ಆಚರಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ನಾಗೇಂದ್ರ ಗುಪ್ತಾರವರು ಮಾತನಾಡಿ ಪ್ರಸ್ತುತ ಮಹಿಳಾ ದಿನಾಚರಣೆಯ ಅಂಗವಾಗಿ ನಮ್ಮ ದೇಶದ ಹಾಗೂ ವಿಶ್ವದ ಮಹಿಳಾ ಸಾಧಕರನ್ನು ನೆನೆಯಬೇಕು. ಅವರ ಸಾಧನೆಗಳಿಂದ ಸ್ಫೂರ್ತಿಪಡೆದು ನಮ್ಮೆಲ್ಲ ಮಹಿಳೆಯರು ಕ್ರೀಯಾಶೀಲರಾಗಬೇಕು. ಮಹಿಳೆಯರಿಗೆ ಸಮಾಜದ ಎಲ್ಲ ಸ್ತರಗಳಲ್ಲಿ ಸಮಾನ ಅವಕಾಶ ಸಿಗುವಂತೆ ವ್ಯವಸ್ಥೆಮಾಡುವುದು ನಮ್ಮೆಲ್ಲರ ಕರ್ತವ್ಯ ಎಂದು ತಿಳಿಸಿದರು. ಸಂಯುಕ್ತ ಸಹಕಾರಿಯ ಎಲ್ಲ ಮಹಿಳಾ ಸಿಬ್ಬಂದಿಯವರಿಗೆ ಮಹಿಳಾ ದಿನಾಚರಣೆಯ ನೆನಪಿನ ಕಾಣಿಕೆ ನೀಡಿ ಶುಭ ಕೋರಲಾಯಿತು.

# ಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಗಳು ಸಹಕಾರಿಯಾಗಲಿ

ಗ್ರಾಮದ ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಸಹಕಾರಿಗಳು ಸಹಕಾರಿಯಾಗ ಬೇಕೆಂದು ನಿಡಸೋಸಿ ಸಿದ್ದಸಂಸ್ಥಾನ ಮಠದ ಶ್ರೀಮ.ನಿ.ಪ್ರ. ಜಗದ್ಗುರು ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು ಹಿತವಚನ ನೀಡಿದರು.

ಇತ್ತೀಚೆಗೆ ಹುಕ್ಕೇರಿ ತಾಲೂಕಿನ ಕೊಟಬಾಗಿಯ ಶ್ರೀ ದುರ್ಗಾಪರಮೇಶ್ವರಿ ವಿವಿದೊದ್ದೇಶಗಳ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ನೇರವೇರಿಸಿ ಆರ್ಶಿವಚನ ನಿಡುತ್ತಾ ಈ ಭಾಗದ ಪ್ರದೇಶ ಫಲವತ್ತತೆಯಿಂದ ಕೂಡಿದ್ದು, ಅದರಲ್ಲಿ ಶುದ್ಧ ಕಾಯ ವಾಚ ಮನಸ್ಸಿನಿಂದ ದುಡಿದಾಗ ಲಾಭ ಶತಸಿದ್ಧ. ಗಳಿಸಿದ ಹಣವನ್ನು ದುರಾಭ್ಯಸಗಳಿಗೆ ದುಂದುವೆಚ್ಚಮಾಡದೆ ಸಹಕಾರಿಗಳಲ್ಲಿ ಹೂಡಿಕೆ ಮಾಡುವುದರ ಮುಖಾಂತರ ಆರ್ಥಿಕವಾಗಿ, ಸದೃಢವಾಗಿ ಸಾಮಾಜಮುಖಿ ಕಾರ್ಯಗಳಿಗೆ ವಿನಿಯೋಗಿಸುವುದರ ಮುಖಾಂತರ ನೆಮ್ಮದಿ ಜೀವನ ನಡೆಸಲು ಸಾಧ್ಯ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಮತ್ತಷ್ಟು ಸೌಹಾರ್ದ ಸಹಕಾರಿಗಳು ರಚನೆಗೊಂಡು ಜನಸಾಮಾನ್ಯರಿಗೆ ಸೇವೆ ನೀಡುವಂತಾಗಲಿ ಎಂದು ಹಾರೈಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೊಟಬಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಹಾದೇವಿ ಮಾದರ ವಹಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿಗಳಾದ ಶ್ರೀ ಗುರುರಾಜ



ಕುಲಕರ್ಣಿ ತಾಲ್ಲೂಕು ಪಂಚಾಯಿತ ಸದಸ್ಯರಾದ ಶ್ರೀ ಬಸವರಾಜ ರಾಮನಕಟ್ಟಿ ಹಾಗೂ ಹುಕ್ಕೇರಿ ಗ್ರಾಮೀಣ ವಿದ್ಯುತ್ ಸಹಕಾರ ಸಂಘದ ನಿರ್ದೇಶಕರಾದ ಶ್ರೀ ಬಸವರಾಜ ಮರಡಿ ಸೇರಿದಂತೆ ಗ್ರಾಮದ ಗಣ್ಯರು ಉಪಸ್ಥಿತರಿದ್ದರು.

ಮೊದಲಿಗೆ ಸ್ವಾಗತವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಹಾದೇವ ಗೋಣಿ ಎಲ್ಲರನ್ನು ಸ್ವಾಗತಿಸಿದರು. ವಂದನಾರ್ಪಣೆಯನ್ನು ಶ್ರೀ ದುರಗಪ್ಪಾ ಪಾಟೀಲ ಮಾಟಿದರೆ ನಿರೂಪಣೆಯನ್ನು ಶ್ರೀ ಲಕ್ಷ್ಮಣ ಡೂಗ ನಡೆಸಿಕೊಟ್ಟರು ಕಾರ್ಯಕ್ರಮದಲ್ಲಿ ಗ್ರಾಮದ ನೂರಾರು ಜನರು ಪಾಲಗೊಂಡಿದ್ದರು.

## ಮೂಡಬಿದ್ರೆಯ ಶ್ರೀ ಸಿಂಚನ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., ಉದ್ಘಾಟನೆ




ಶ್ರೀ ಸಿಂಚನ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ನಿ., ಮೂಡಬಿದ್ರೆ ಇದರ ಉದ್ಘಾಟನಾ ಸಮಾರಂಭವನ್ನು ಪರಮ ಪೂಜ್ಯ ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳವರು ಶ್ರೀ ಜೈನಮಠ, ಮೂಡಬಿದ್ರೆ, ದೀಪ ಬೆಳಗಿಸಿ ಆಶೀರ್ವದಿಸಿದರು. ಶ್ರೀ ಕೆ.ಅಭಯಚಂದ್ರ ಜೈನ್, ಮಾನ್ಯ ಯುವಜನ ಸೇವೆ ಮತ್ತು ಮೀನುಗಾರಿಕಾ ಸಚಿವರು, ಕರ್ನಾಟಕ ಸರ್ಕಾರ ಇವರು ಸಮಾರಂಭದ ಉದ್ಘಾಟನೆಯನ್ನು ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್ಆರ್ ಸತೀಶ್‌ಚಂದ್ರರವರು ವಹಿಸಿಕೊಂಡಿದ್ದರು. ಸಮಾರಂಭದಲ್ಲಿ ಹಿರಿಯ ಗಣ್ಯರು ಭಾಗವಹಿಸಿದರು. ಈ ಸಮಾರಂಭದಲ್ಲಿ ನಾಲ್ಕು ಸ್ವ ಸಹಾಯ ಗುಂಪುಗಳ ಸಂಘಗಳನ್ನು ಉದ್ಘಾಟಿಸಲಾಯಿತು.

ಶ್ರೀ ಆದಿಶಕ್ತಿ ಜಾಡಾಳಮ್ಮ ಸೌಹಾರ್ದ ಪತ್ತಿನ ಸಹಕಾರ ನಿ., ಇದರ ನೂತನ ಕಟ್ಟಡ ಉದ್ಘಾಟನೆಯನ್ನು ಡಾ|| ಶಿವಕುಮಾರ ಸ್ವಾಮೀಜಿಯವರು ಚಾಲನೆ ನೀಡಿ ಆಶೀರ್ವದಿಸಿದರು.





ಶ್ರೀ ಪೂರ್ಣನಂದ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಮಂಗಳೂರು ಇದರ ಅಧ್ಯಕ್ಷರಾಗಿ ಶ್ರೀ ಗಣೇಶ್ ಶೆಣೈರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಮಹದೇವ್ ಪ್ರಸಾದ್‌ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.



ಆದರ್ಶ ಸೌಹಾರ್ದ ಪತ್ತಿನ ಸಹಕಾರಿ ನಿ., ಚಿತ್ರದುರ್ಗ ಇದರ ಅಧ್ಯಕ್ಷರಾಗಿ ಶ್ರೀ ಡಿ.ಆರ್.ತಿಪ್ಪೇಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಚಂದ್ರಶೇಖರ್ ರವರು ಆಯ್ಕೆಯಾಗಿರುತ್ತಾರೆ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಅರಿಹಂತ ಅಲ್ಪಸಂಖ್ಯಾತರ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ. ಧುಪದಾಳ ಬೆಳಗಾವಿ ಜಿಲ್ಲೆ.



ಶ್ರೀ ಜನ್ನಪ್ಪ ಬೆಳವಿ
ಅಧ್ಯಕ್ಷರು



ಶ್ರೀ ಭರಮಪ್ಪ ಜನ್ನಪ್ಪ ಪರಪ್ಪ
ಉಪಾಧ್ಯಕ್ಷರು

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಗೌಳಿಗರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಹೊಸಪೇಟೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ



ಶ್ರೀ ಗೌಳಿ ಕುಮಾರಸ್ವಾಮಿ
ಅಧ್ಯಕ್ಷರು



ಶ್ರೀ ಗೌಳಿ ರುದ್ರಪ್ಪ
ಉಪಾಧ್ಯಕ್ಷರು



ಶ್ರೀ ಭುವನೇಶ್ವರಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಗಂಗಾವತಿ ಇದರ ಆಡಳಿತ ಮಂಡಳಿಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ದಿನಾಂಕ : 03.03.2014ರಂದು ನಡೆಸಲಾಯಿತು. ಸಹಕಾರಿಯ ಅಧ್ಯಕ್ಷರಾಗಿ ಶ್ರೀ ವಿರುಪಾಕ್ಷಪ್ಪ ಮುಷ್ಠಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಸುಭಾಷ್ ಚಂದ್ ಡಿ. ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

ಹೋಟೆಲ್ ಮಾಲೀಕರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ತುಮಕೂರು ಇದರ ಅಧ್ಯಕ್ಷರಾಗಿ ಶ್ರೀ ಸಿ.ವಿ. ಮಹದೇವಯ್ಯ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಚ್.ಶ್ರೀನಿವಾಸ್ ಹತ್ವಾರ್ ರವರು ಆಯ್ಕೆಯಾಗಿರುತ್ತಾರೆ.

## ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಯಾಗಿ ಶ್ರೀಮತಿ ಲಿಝಿ ಫಿಲಿಪ್



ಸಹಕಾರ ಸಂಘಗಳ ಅಪರ ನಿಬಂಧಕರಾದ ಕರ್ನಾಟಕ ಗ್ರಾಹಕರ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಲಿಝಿ ಫಿಲಿಪ್ಸರವರು ಸಹಕಾರ ಇಲಾಖೆಯ ವಿಶೇಷ ಕರ್ತವ್ಯಾಧಿಕಾರಿಯಾಗಿ ದಿನಾಂಕ 3/3/2014 ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

## ಬಿ. ವಸಂತನಾಯಕ್ ಆರ್.ಐ.ಸಿ.ಎಂ. ಪ್ರಾದೇಶಿಕ ನಿರ್ದೇಶಕರು



ಬೆಂಗಳೂರಿನ ಪ್ರಾದೇಶಿಕ ಸಹಕಾರಿ ನಿರ್ವಹಣಾ ಸಂಸ್ಥೆಯ ಪ್ರಾದೇಶಿಕ ನಿರ್ದೇಶಕರಾಗಿ ಶ್ರೀ ಬಿ. ವಸಂತನಾಯಕ್ ಅವರು ನೇಮಕಗೊಂಡಿದ್ದು ಅಧಿಕಾರ ಸ್ವೀಕರಿಸಿದ್ದಾರೆ. ಶ್ರೀ ನಾಯಕ್ ಅವರು ಹಿಂದೆ ಇದೇ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಇತ್ತೀಚೆಗೆ ನಾಗಪುರ ಸಹಕಾರ ನಿರ್ವಹಣಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

## ಕಾನೂನು ಕೋಶ ಹಾಗೂ ಸೌಹಾರ್ದ ಸಹಕಾರಿ ವಿಭಾಗದ ಜಂಟಿ ನಿಬಂಧಕರಾಗಿ – ಶ್ರೀ ಪಿ.ಆರ್.ಪಳಂಗಪ್ಪ



ಸಹಕಾರ ಸಂಘಗಳ ಜಂಟಿ ನಿಬಂಧಕರಾಗಿ ಪದೋನ್ನತಿ ಪಡೆದ ಶ್ರೀ.ಆರ್.ಪಳಂಗಪ್ಪರವರು ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ (ಕಾನೂನು ಕೋಶ) ಹಾಗು ಸೌಹಾರ್ದ ಸಹಕಾರಿ ವಿಭಾಗದ ಜಂಟಿ ನಿಬಂಧಕರಾಗಿ ದಿನಾಂಕ : 4–3–2014 ರಂದು ಅಧಿಕಾರ ವಹಿಸಿಕೊಂಡಿರುತ್ತಾರೆ.

## ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜಂಟಿನಿಬಂಧಕರಾಗಿ – ಶ್ರೀ ಡಿ.ಪಾಂಡುರಂಗಪ್ಪ ಗರಗ



ಸಹಕಾರ ಸಂಘಗಳ ಜಂಟಿ ನಿಬಂಧಕರಾಗಿ ಪದೋನ್ನತಿ ಪಡೆದ ಶ್ರೀ. ಡಿ.ಪಾಂಡುರಂಗಪ್ಪ ಗರಗರವರು ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜಂಟಿನಿಬಂಧಕರಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.



ತುಮಕೂರು ಮರ್ಚೆಂಟ್ಸ್ ಸೌಹಾರ್ದ ಸಹಕಾರಿಯ ಏಳನೇಯ ಶಾಖೆಯ ಪ್ರಾರಂಭೋತ್ಸವ ದಿನಾಂಕ : 21.03.2014 ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಜರುಗಿತು. ಚಿತ್ರದಲ್ಲಿ ಸ್ವಾಮೀಜಿಯವರೊಂದಿಗೆ ಸಹಕಾರಿಯ ಅಧ್ಯಕ್ಷ ಎನ್.ಎಸ್. ಜಯಕುಮಾರ್ ಹಾಗೂ ಮತ್ತಿತರರು ಇದ್ದಾರೆ.



ಶ್ರೀ ನಿರ್ಗುಣದತ್ತ ಸೌಹಾರ್ದ ಪತ್ತಿನ ಸಹಕಾರಿ ನಿ., ದೇವಲಾ ಗಾಣಗಾಪುರ, ತಾ:ಅಫ್ಜಲಪುರ, ಜಿ:ಗುಲಬರ್ಗಾ ಇದರ ಆಡಳಿತ ಮಂಡಳಿ ಸದಸ್ಯರು ದಿನಾಂಕ: 19–03–2014 ರಂದು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರನ್ನು ಗುಲಬರ್ಗಾ ವಿಭಾಗದಲ್ಲಿ ಶಾಲು ಹೊದಿಸಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಶಾಂತಿನಾಥ ಪಂಡಿತ, ಸದರಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಭೀಮರೆಡ್ಡಿ ಹಾಗೂ ಆಡಳಿತ ಮಂಡಳಿಯ ಸದಸ್ಯರು ಹಾಜರಿದ್ದರು.

# ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಸಹಕಾರ ವಿಷಯ ಪ್ರಾರಂಭಿಸಲು ಕ್ರಮ - ಕುಲಪತಿ ಡಾ. ಈ.ಟಿ.ಪುಟ್ಟಯ್ಯ



ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ನಡೆದ ಸಂವಾದ ಕಾರ್ಯಕ್ರಮ ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್, ಕುಲಪತಿ ಶ್ರೀ ಈ.ಟಿ.. ಪುಟ್ಟಯ್ಯ, ಅರ್ಥಶಸ್ತ್ರ ವಿಭಾಗದ ಮುಖ್ಯಸ್ಥೆ ಡಾ॥ ಛಾಯಾ ದೇಗಾಂವಕರ್, ಪ್ರೊ. ವಾಸುದೇವ್ ಸೇಡಂ, ಸಂಯುಕ್ತ ಸಹಕಾರಿ ನಿರ್ದೇಶಕ ಶ್ರೀ ಶಾಂತಿನಾಥ ಪಂಡಿತ್, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ಮುಂತಾದವರು ಇದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ.ಈ.ಟಿ.ಪುಟ್ಟಯ್ಯನವರು ವಹಿಸಿ ಇದೊಂದು ಅತ್ಯಂತ ಉತ್ತಮವಾದ ಕಾರ್ಯಕ್ರಮ. ಯುವಕರಿಗೆ ನಿಜವಾಗಿಯೂ ಈ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ಅಗತ್ಯವಾಗಿತ್ತು. ಸಂಯುಕ್ತ ಸಹಕಾರಿಯವರು ಒಳ್ಳೆಯ ಕಾರ್ಯಕ್ರಮವನ್ನೆ ಹಮ್ಮಿಕೊಂಡಿದ್ದಾರೆ. ನಮ್ಮ ವಿಶ್ವವಿದ್ಯಾಲಯದಲ್ಲೂ ಸಹ ಸಹಕಾರ ವಿಷಯವನ್ನು ಬೋಧಿಸುವ ಬಗ್ಗೆ ಚಿಂತನೆ ನಡೆಸಲಾಗುವುದು. ಮುಂಬರುವ ದಿನಗಳಲ್ಲಿ ವಿಶ್ವವಿದ್ಯಾಲಯ ದಲ್ಲಿ ಸಹಕಾರದ ವಿಷಯವೂ ಒಂದಾಗಿರುತ್ತದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಗುಲ್ಬರ್ಗಾ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಶ್ರೀ ಸೋಮಶೇಖರ ಗೋನಾಯಕ ರವರು ಸಹಕಾರ ಅತ್ಯಂತ ವಿಶಾಲವಾದ ಕ್ಷೇತ್ರ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಆರ್ಥಿಕ ಅಭಿವೃದ್ಧಿಯ ಅವಕಾಶವಿರುವ ಕ್ಷೇತ್ರ ಇದಾಗಿದೆ. ಈ ಕ್ಷೇತ್ರದ ಬಗ್ಗೆ ಯುವಕರು ತಿಳಿದುಕೊಂಡು ತಮ್ಮನ್ನು ತೊಡಗಿಸಿಕೊಳ್ಳುವ ಅವಕಾಶ ಪಡೆದುಕೊಳ್ಳುವ ಬಗ್ಗೆ ಮಾಹಿತಿಯನ್ನು ನೀಡುವ ಇಂತಹ ಕಾರ್ಯಕ್ರಮವನ್ನು ಏರ್ಪಡಿಸಿರುವ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ಉತ್ತಮ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನಿಧ್ಯವನ್ನು ವಹಿಸಿದ್ದ ಶ್ರೀ ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿಜಿ ಶ್ರೀ ಮಹೇಶ್ವರಾನಂದರವರು ಮಾತನಾಡಿ ಸಹಕಾರಿ ಕ್ಷೇತ್ರದ ಸಾಧನೆ ಮೆಚ್ಚುವಂತಹದ್ದು. ಇದರ ಸದುಪಯೋಗವನ್ನು ವಿಶೇಷವಾಗಿ ಯುವಕರು ಮಾಡಿಕೊಳ್ಳಲು ಇಂತಹ ಸಂವಾದ ಕಾರ್ಯಕ್ರಮಗಳು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಸ್ವಾಮಿ ವಿವೇಕಾನಂದರು ತಿಳಿಸಿದಂತೆ ಯುವಕರು ಈ ದೇಶದ ಅತ್ಯಂತ ಪ್ರಬಲ ಶಕ್ತಿಯಾಗಿದ್ದಾರೆ. ಈ ಯುವಶಕ್ತಿಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಪ್ರಪಂಚದ ಎಲ್ಲ ಬಗೆಯ ಜ್ಞಾನವನ್ನು ಹೊಂದುವುದು ಅವಶ್ಯಕವಾಗಿದೆ ಎಂದರು. ನಂತರ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿರುವ ಡಾ.ಛಾಯಾ ದೇಗಾಂವಕರರವರು ಗಣ್ಯರನ್ನು ಎಲ್ಲ ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ. ಜಿ. ಪಾಟೀಲರವರು ಪ್ರಾಸ್ತಾವಿಕವಾಗಿ ಮಾತನಾಡಿ ಸಂಯುಕ್ತ ಸಹಕಾರಿಯು ರಾಜ್ಯದ ಸೌಹಾರ್ದ ಸಹಕಾರಿಯ ನೇತಾರನಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಒಟ್ಟಾರೆ ಸಹಕಾರಿ ಕ್ಷೇತ್ರದ ಅಭಿವೃದ್ಧಿಯತ್ತ ಗಮನಹರಿಸಿ ಯುವಕರನ್ನು ಈ ಕ್ಷೇತ್ರದೆಡೆಗೆ ಕರೆತರುವ ದೃಷ್ಟಿಯಿಂದ ಈ ರೀತಿಯ ಹೊಸ ಬಗೆಯ ಅವಶ್ಯಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಇದು ಪ್ರಸಕ್ತ ಸಾಲಿನ ಎರಡನೇಯ ಕಾರ್ಯಕ್ರಮವಾಗಿದೆ. ಮುಂಬರುವ ದಿನಗಳಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಈ ಸಂವಾದಕಾರ್ಯಕ್ರಮವನ್ನು



ಪ್ರಧಾನ ವಿಷಯ ಮಂಡನೆ



ಸಂವಾದ ನಡೆಸಿಕೊಟ್ಟ ಸಂಪನ್ಮೂಲ ವ್ಯಕ್ತಿಗಳು

ಹಮ್ಮಿಕೊಳ್ಳಲು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಉದ್ದೇಶಿಸಿದೆ ಎಂದು ತಿಳಿಸಿದರು.

ಸಂಯುಕ್ತ ಸಹಕಾರಿಯ ಗುಲ್ಬರ್ಗಾ ಜಿಲ್ಲೆಯ ಪ್ರತಿನಿಧಿ ಶ್ರೀ ಶಾಂತಿನಾಥ ಪಂಡಿತರವರು ವಂದನಾರ್ಪಣೆ ಸಲ್ಲಿಸಿದರು. ಬೆಂಗಳೂರಿನ ಪ್ರಾಂತೀಯ ಸಹಕಾರಿ ಆಡಳಿತ ನಿರ್ವಹಣಾ ಸಂಸ್ಥೆಯ ಎಮ್ ಬಿ ಎ ವಿಭಾಗದ ನಿರ್ದೇಶಕ ಡಾ.ಎಸ್.ಎ.ಸಿದ್ಧಾಂತಿಯವರು ಸಹಕಾರಿ ಕ್ಷೇತ್ರದ ಸಾಧನೆಗಳು – ಸವಾಲುಗಳು – ಅವಕಾಶಗಳು ಮತ್ತು ಯುವಕರ ಪಾತ್ರ ವಿಷಯದ ಪ್ರಧಾನ ವಿಷಯದ ಬಗ್ಗೆ ಮಾತನಾಡಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಶ್ರೀ ಚಂದ್ರಕಾಂತ.ಎಮ್. ಯಾತನೂರರವರು ಯುವಕರಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಸಂಯುಕ್ತ ಸಹಕಾರಿಯ ಪ್ರಯತ್ನ ಶ್ಲಾಘನೀಯ ಎಂದರಲ್ಲದೆ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಸಹಕಾರ ವಿಷಯವನ್ನು ಅಳವಡಿಸಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು ಎಂದು ತಿಳಿಸಿದರು. ■

## ನಿರುದ್ಯೋಗ ಸಮಸ್ಯೆಗೆ ಸಹಕಾರ ಕ್ಷೇತ್ರದಲ್ಲಿದೆ ಪರಿಹಾರ - ಗುರುನಾಥ ಜಾಂತಿಕರ

ಸಹಕಾರಿ ಸಂಸ್ಥೆಗಳನ್ನು ಹುಟ್ಟುಹಾಕುವುದರ ಮೂಲಕ ನಿರುದ್ಯೋಗ ಸಮಸ್ಯೆ ಬಗೆ ಹರಿಸಿಕೊಳ್ಳಲು ಸಾಧ್ಯ ಎಂದು ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ ಸಲಹೆ ನೀಡಿದರು. ಯುವಸಹಕಾರಿಗಳಿಗೆ ಸಹಕಾರಿ ಕ್ಷೇತ್ರದ ಮಾಹಿತಿ ಒದಗಿಸಿ ಅವರನ್ನು ಸಹಕಾರಿ ಕ್ಷೇತ್ರಕ್ಕೆ ಬರಮಾಡಿಕೊಳ್ಳುವ ದೃಷ್ಟಿಯಿಂದ ಗುಲ್ಬರ್ಗಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಸೌಹಾರ್ದ ಸಂಯುಕ್ತ ಸಹಕಾರಿಯು ಹಮ್ಮಿಕೊಂಡಿದ್ದ ಸಹಕಾರ ಕುರಿತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಕ್ಷೇತ್ರದಲ್ಲಿ ಯುವಕರು ಹೆಚ್ಚಾಗಿ ತೊಡಗಿಸಿಕೊಂಡಲ್ಲಿ ಈ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ ಆದ್ದರಿಂದ ಸೌಹಾರ್ದ ಸಂಯುಕ್ತ ಸಹಕಾರಿಯು ಈ ಸಂವಾದದ ಮೂಲಕ ಯುವಕರನ್ನು ಈ ಕ್ಷೇತ್ರಕ್ಕೆ ಕರೆತರುವ ಕಾರ್ಯವನ್ನು ಹಮ್ಮಿಕೊಂಡಿದೆ ಎಂದರು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಯಾಗಿ 13 ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ 2700ಕ್ಕಿಂತಲೂ ಹೆಚ್ಚು ಸೌಹಾರ್ದ ಸಹಕಾರಿಗಳು ನೊಂದಣಿಯಾಗಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಹೆಚ್ಚಾಗಿ ಯುವಕರು ಈ ಸೌಹಾರ್ದ ಸಹಕಾರಿ ಕ್ಷೇತ್ರವನ್ನು ಆಯ್ಕೆಮಾಡಿಕೊಳ್ಳುತ್ತಿರುವುದು ಸಂತೋಷದಾಯಕವಾಗಿದೆ ಎಂದು ತಿಳಿಸಿದರು. ■

# ಸಂವಾದ ಕಾರ್ಯಕ್ರಮ

ಸಹಕಾರ ಕ್ಷೇತ್ರ ಸಾಕಷ್ಟು ಉತ್ತಮ ಕೆಲಸ ಮಾಡುತ್ತಿದ್ದು, ಅದರ ವ್ಯಾಪಕ ಪ್ರಚಾರಕ್ಕೆ ಸಹಕಾರ ಕ್ಷೇತ್ರದವರು ಪತ್ರಿಕೆಯವರೊಂದಿಗೆ ನಿಕಟ ಸಂಪರ್ಕದಲ್ಲಿರಬೇಕು ಆಗ ಮಾತ್ರ ಯುವಕರು ಈ ಕ್ಷೇತ್ರಕ್ಕೆ ಹೆಚ್ಚಿಗೆ ಆಕರ್ಷಿತರಾಗುತ್ತಾರೆ ಎಂದು ವಿಜಯವಾಣಿ ಪತ್ರಿಕೆಯ ಸ್ಥಾನಿಕ ಸಂಪಾದಕ ಶ್ರೀ ವಾದಿರಾಜ ವ್ಯಾಸಮುದ್ರಿಯವರು ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಹಕಾರ ಪತ್ರಿಕೆಯ ಗೌರವ ಸಂಪಾದಕ ಶ್ರೀ ಪಿ.ರುದ್ರಪ್ಪನವರು ನಡೆಸಿ ಕೊಟ್ಟ ಸಂವಾದದಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಛಾಯಾ ದೇಗಾಂವಕರ, ಪ್ರೊ.ವಾಸುದೇವ ಶೇಡಂ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಪಿ.ಕೆ.ಖಂಡೋಬಾ, ವಿಜಯವಾಣಿ ಸ್ಥಾನಿಕ ಸಂಪಾದಕ ಶ್ರೀ ವಾದಿರಾಜ ವ್ಯಾಸಮುದ್ರಿ, ಗುಲ್ಬರ್ಗಾ ಪ್ರಥಮ ದರ್ಜೆಕಾಲೇಜಿನ ಉಪನ್ಯಾಸಕ ಶ್ರೀ ಟಿ.ಗುರುಬಸಪ್ಪ, ಸಹಕಾರಿ ಇಲಾಖೆಯ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್.ಪರಶಿವಮೂರ್ತಿ, ಗುಲ್ಬರ್ಗಾ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕ ಶ್ರೀ ವಿಶ್ವನಾಥ ಮಲಕೋಡ, ಸಂಯುಕ್ತ ಸಹಕಾರಿಯ ನಿರ್ದೇಶಕಿ ಶ್ರೀಮತಿ ಮಂಜುಳಾ ಪಾಟೀಲ್, ಗುಲ್ಬರ್ಗಾ ಜಿಲ್ಲಾ ಮಹಿಳಾ ಸೌಹಾರ್ದ ಸಹಕಾರಿಯ ಅಧ್ಯಕ್ಷೆ ಶ್ರೀಮತಿ ಶೈಲಜಾ



ಸಂವಾದದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು

ಪಾಟೀಲ್, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ.ಜಿ.ಪಾಟೀಲ್‌ರವರು ಭಾಗವಹಿಸಿ ಸಹಕಾರಿ ಕ್ಷೇತ್ರದ ವಿವಿಧ ಆಯಾಮಗಳಿಗೆ ಸಮರ್ಪಕ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯ ಮಂಡಿಸಿದರು.

ಸಂವಾದದಲ್ಲಿ 250ಕ್ಕೂ ಹೆಚ್ಚು ವಿದ್ಯಾರ್ಥಿ–ವಿದ್ಯಾರ್ಥಿನಿಯರು 50 ಕ್ಕೂ ಹೆಚ್ಚು ಸಹಕಾರಿ ಪ್ರತಿನಿಧಿಗಳು ಸಂಯುಕ್ತ ಸಹಕಾರಿಯ ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ, ಗುಲ್ಬರ್ಗಾ ವಿಭಾಗೀಯ ಅಧಿಕಾರಿ ಶ್ರೀ ಸಂಜಯ ಕೋರಟಕರ, ಶ್ರೀ ರಾಜಶೇಖರ ಹಾಗೂ ಸಿಬ್ಬಂದಿ ವರ್ಗ, ಬೀದರ ಜಿಲ್ಲೆಯ ಸಹಕಾರಿಗಳ ಒಕ್ಕೂಟದ ಶ್ರೀ ಸಂಜಯ ಪಾಟೀಲ್, ಶ್ರೀ ರಾಜಶೇಖರ, ಅನೇಕ ಪತ್ರಿಕಾ ಹಾಗೂ ಮಾಧ್ಯಮ ಮಿತ್ರರು ಭಾಗವಹಿಸಿದ್ದರು. ■

# ಆಡಳಿತದಲ್ಲಿ ವೃತ್ತಿ ಕೌಶಲ್ಯ

▶▶ **ಬಿ.ಎ.ಮಹದೇವಪ್ಪ,** ಸನ್ಮತಿ ಫೌಂಡೇಶನ್, ಶಿವಮೊಗ್ಗ.

ಇಂದು ಏನಾಗುತ್ತಿದೆ...!

- ಜನರು ತಮ್ಮ ಕೆಲಸ ಕೂಡಲೇ ಆಗಬೇಕೆಂದು ನಿರೀಕ್ಷಿಸುತ್ತಿದ್ದಾರೆ;
- ನಿಧಾನವಾಗಿ... ನಿರ್ಲಕ್ಷ್ಯವಾಗಿ ಕೆಲಸ ಮಾಡುವವರನ್ನು ಪ್ರಶ್ನಿಸುವ ಹಂತಕ್ಕೆ ಬಂದಿದ್ದಾರೆ.
- ಮೀಡಿಯಾದವರು ಎಲ್ಲವನ್ನೂ ಗಮನಿಸುತ್ತಿದ್ದಾರೆ.
- ಪಾರದರ್ಶಕ ಕಾಯಿದೆ, ಸಕಾಲ ಯೋಜನೆ ಮತ್ತು ಮಾಹಿತಿ ಹಕ್ಕು ಕಾಯಿದೆಗಳಿಗೆ ಆದ್ಯತೆ ನೀಡಲಾಗಿದೆ.
- ಸಾರ್ವಜನಿಕ ಬಾಂಧವ್ಯ ಮತ್ತು ಉತ್ತಮ ಸೇವೆ ಇಂದಿನ ಅಗತ್ಯವಾಗಿದೆ.

**ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಗೆ ನೀಡುವ ಸಂದರ್ಭದಲ್ಲಿ...**

- **ಮಾನ್ಯ ಪ್ರಧಾನ ಮಂತ್ರಿಗಳು**
- **ಈ ಸರ್ಕಾರ ಜನರ ಸರ್ಕಾರ**
- **ಈ ದೇಶದಲ್ಲಿ ಭಿಕ್ಷುಕನೂ ತೆರಿಗೆ ಕಟ್ಟುತ್ತಾನೆ**
- **ಸರ್ಕಾರದಲ್ಲಿ ಏನು ನಡೆಯುತ್ತಿದೆ... ಎಂಬುದನ್ನು ತಿಳಿದುಕೊಳ್ಳುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇದೆ**
- **ನಾವು ಸ್ಪಂದಿಸುವ ಆಡಳಿತ ನೀಡಬೇಕು**

**ಸ್ಪಂದಿಸುವ ಆಡಳಿತ ಎಂದರೆ...**

ನೀತಿ ನಿಯಮಗಳಿಗೆ ಬದ್ಧವಾದ ಆಡಳಿತ
ಜನರ ನಿರೀಕ್ಷೆಗಳತ್ತ ಸಾಗುವ ಆಡಳಿತ
ಮಾನವೀಯತೆಯ ಸಿಂಚನವಿರುವ ಆಡಳಿತ
ನಾವು ಮಾಡುತ್ತಿರುವುದು ಜನರ ಸೇವೆ... ಎಂದು ತಿಳಿದಿರುವ ಆಡಳಿತ
– ಇದೇ ಪರಿಣಾಮಕಾರಿ ಆಡಳಿತ.

**ಪರಿಣಾಮಕಾರಿ ಪದದ ಅರ್ಥ...**

ಕೆಲಸವನ್ನು ಸರಿಯಾಗಿ ಮಾಡುವುದು... ದಕ್ಷತೆ ಎನಿಸಿದರೆ
ಸರಿಯಾದ ಕೆಲಸವನ್ನು ಮಾಡುವುದು... ಪರಿಣಾಮಕಾರಿ (effectiveness) ಎನಿಸುತ್ತದೆ.

**ಪೀಟರ್ ಡ್ರಕ್ಕರ್**

- ನಾವು "ಏನು" ಕೆಲಸ ಮಾಡಬೇಕು ಎಂಬುದನ್ನು – ನಮ್ಮ 'ಬಾಸ್' ಹೇಳುತ್ತಾರೆ.
- ಆದರೆ... ಆ ಕೆಲಸವನ್ನು "ಹೇಗೆ" ಮಾಡಬೇಕು ಎಂಬುದನ್ನು ತಿಳಿದುಕೊಂಡು... ಅದರಂತೆ ಮಾಡಿದರೆ...ಆ ಕೆಲಸ ಪರಿಣಾಮಕಾರಿ ಎನಿಸುತ್ತದೆ.
- "ಏನು" ಎಂಬುದನ್ನು ತಿಳಿದ ಸ್ಥಿತಿ 'ಅಪೂರ್ಣ'
- "ಹೇಗೆ" ಎಂಬುದನ್ನು ಅರಿತಾಗ ಮಾತ್ರ ಅದು 'ಪರಿಪೂರ್ಣ'
- ಈ ನಿಟ್ಟಿನಲ್ಲಿ... ಕೆಲಸ ಮಾಡುವವರ ಮನೋಭಾವ (attitude) ಮುಖ್ಯವಾಗು....

**ಹಳೆಯದೊಂದು ಕತೆ ಇದೆ...**

- ಇಟ್ಟಿಗೆ ಜೋಡಿಸುವ ಮೂರು ಮುಂದಿಯದು. ಅದು ಅವರ ಚಿಂತನೆಗಳಿಗೆ ಸಂಬಂಧಿಸಿದ್ದು. ಅದನ್ನು ಇನ್ನೊಮ್ಮೆ ನೋಡೋಣ...
- "ನೀನೇನು ಮಾಡುತ್ತಿದ್ದೀಯೆ" ಎಂದು ಮೊದಲನೆಯವನನ್ನು ಕೇಳಿದಾಗ ಆತ ಉತ್ತರಿಸಿದ "ಇಟ್ಟಿಗೆ ಜೋಡಿಸುತ್ತಿದ್ದೇನೆ" ಎಂದು. ಅದೇ ಪ್ರಶ್ನೆಯನ್ನು ಎರಡನೆಯವನಿಗೆ ಕೇಳಿದಾಗ ಅವನು ಹೇಳಿದ "ಜೀವನ ನಡೆಯಬೇಕಲ್ಲ... ಕೂಲಿ ಕೆಲಸ ಮಾಡುತ್ತಿದ್ದೇನೆ" ಎಂದು.
- ಮೂರನೆಯವನು "ನಾನು ಸುಂದರವಾದ ದೇಗುಲವನ್ನು ಕಟ್ಟುತ್ತಿದ್ದೇನೆ" ಎಂದ.
- ಮೂರನೆಯವನು ಕೇವಲ ಇಟ್ಟಿಗೆ ಜೋಡಿಸುವವನಾಗಿ ಉಳಿಯಲಿಲ್ಲ. ಕಂಟ್ರಾಕ್ಟುದಾರನಾಗಿ, ಉನ್ನತ ಮಟ್ಟಕ್ಕೆ ಹೋದ. ಏಕೆಂದರೆ... ಆತನ ಮನಸ್ಸು ತನ್ನ ಕೆಲಸದಲ್ಲಿ ತನ್ನ ವಿಷಯದಲ್ಲಿ ಯಶಸ್ಸು ಸಾಧಿಸುವ ಆಲೋಚನೆಗಳಿಗೆ ತೆರೆದುಕೊಂಡಿತ್ತು.
- ವೈದ್ಯರಾಗಿರಬಹುದು.
- ಚಾರ್ಟರ್ಡ್ ಅಕೌಂಟೆಂಟ್ ಆಗಿರಬಹುದು.
- ಗ್ರಾಹಕ ಸೇವಾ ಅಧಿಕಾರಿಯಾಗಿರಬಹುದು.
- ವಿಮಾನ ಪರಿಚಾರಿಕೆಯಾಗಿರಬಹುದು.
- ಯಾವುದೇ ವೃತ್ತಿಯಲ್ಲಿರುವ...ಯಾರೇ ಆಗಿರಬಹುದು...
- ಆ ವ್ಯಕ್ತಿಗೆ ವೃತ್ತಿ ಕೌಶಲ್ಯ ಅಗತ್ಯವಾಗಿ ಇರಲೇಬೇಕು.
- ವೈದ್ಯನೊಬ್ಬ ತನ್ನ ರೋಗಿಯ ರೋಗವನ್ನು, ಗುರುತಿಸಿ, ಚಿಕಿತ್ಸೆ ನೀಡಿ ರೋಗವನ್ನು ಗುಣಪಡಿಸಿದಾಗ ಆತ ಉತ್ತಮ ವೈದ್ಯ ಎನಿಸಿಕೊಳ್ಳುತ್ತಾನೆ.
- ಆ ಚಿಕಿತ್ಸೆಯ ಜೊತೆಗೆ... ಆ ರೋಗ ಮತ್ತೆ ಬರದ ಹಾಗೆ ಎಚ್ಚರಿಕೆ ವಹಿಸುವಂತೆ, ರೋಗಿಗೆ ಮಾಹಿತಿ ನೀಡಿದರೆ ಅಂತಹ ವೈದ್ಯ... ಮಾನವೀಯತೆಯುಳ್ಳ ಶ್ರೇಷ್ಠ ವೈದ್ಯ ಎನಿಸಿಕೊಳ್ಳುತ್ತಾನೆ
- ಒಬ್ಬ ಸಾಫ್ಟ್‌ವೇರ್ ಇಂಜಿನಿಯರ್ ತಾನು ಕೆಲಸ ಮಾಡುವ ಸಂಸ್ಥೆಗೆ ಸೂಕ್ತವಾದ ಪ್ರೋಗ್ರಾಂ ತಯಾರಿಸಿ ಕೊಟ್ಟಾಗ ಅವನೊಬ್ಬ ಉತ್ತಮ ಇಂಜಿನಿಯರ್ ಎನಿಸಿಕೊಳ್ಳುತ್ತಾನೆ.
- ಆದರೆ ಆತ ತಾನು ತಯಾರಿಸಿದ ಪ್ರೋಗ್ರಾಂ ಅನ್ನು ಸುಲಭವಾಗಿ ಅರ್ಥಮಾಡಿಕೊಂಡು ಬಳಸುವಂತೆ ಹಾಗೂ ಅದರಿಂದ ಹೆಚ್ಚಿನ ಅನುಕೂಲಗಳನ್ನು ಪಡೆದುಕೊಳ್ಳುವುದು ಹೇಗೆ ಎಂಬುದನ್ನು ತಿಳಿಸಿಕೊಟ್ಟರೆ ಅವನೊಬ್ಬ... ಶ್ರೇಷ್ಠ ಇಂಜಿನಿಯರ್ ಎನಿಸುತ್ತಾನೆ

**ವೃತ್ತಿ ಕೌಶಲ್ಯ ಎಂದರೆ...**

- ಸಮಯಪಾಲನೆ.
- ಪರಿಣಾಮಕಾರಿ ಸಂವಹನ
- ಸಹೋದ್ಯೋಗಿಗಳೊಂದಿಗೆ ಸಾಮರಸ್ಯ.
- ಶಿಷ್ಟಾಚಾರದ ನಡೆ-ನುಡಿ.
- ಒತ್ತಡ ನಿರ್ವಹಣೆ.
- ಇತರರನ್ನು ಕ್ರಿಯಾಶೀಲತೆಗೆ ಪ್ರೇರೇಪಿಸುವಿಕೆ.
- ನಾಯಕತ್ವ ವಹಿಸುವುದು.
- ಸೂಕ್ತ ನಿರ್ಧಾರ ಕೈಗೊಳ್ಳುವ ಚಾಕಚಕ್ಯತೆ.
- ಸೃಜನಶೀಲತೆ

ಮುಂದಿನ ಸಂಚಿಕೆಗೆ...

# 2013-14ನೇ ಸಾಲಿನ ಅಂತ್ಯಕ್ಕೆ ಸೌಹಾರ್ದ ಸಹಕಾರಿಗಳ ಹಣಕಾಸಿನ ವಿವರಗಳು

**ಸುಕೋ ಬ್ಯಾಂಕ್ ಬಳ್ಳಾರಿ.**
ಠೇವಣಿಗಳು : 226.26 ಕೋಟಿ ಸಾಲಗಳು : 160.34 ಕೋಟಿ.
ಲಾಭ : ರೂ. 3.5 ಕೋಟಿ ಎನ್.ಪಿ.ಎ.1.82

**ದಿ ಮರ್ಚೆಂಟ್ಸ ಸೌಹಾರ್ದ ಸಹಕಾರಿ ಬ್ಯಾಂಕ ನಿ ಚಿತ್ರದುರ್ಗ.**
**ಠೇವಣಿಗಳು** : 51.07 ಕೋಟಿ **ಸಾಲಗಳು** : 41.75 ಕೋಟಿ
**ಲಾಭ** : 1.74 ಕೋಟಿ (ತೆರಿಗೆ ಪಾವತಿಸಿದ ನಂತರ.)

**ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ ನಿ ಹೊಸಪೇಟೆ.**
**ಠೇವಣಿಗಳು** : 122.00 ಕೋಟಿ. **ಸಾಲಗಳು** : ರೂ 81.00 ಕೋಟಿ.
**ನಿವ್ವಳ ಲಾಭ** : ರೂ 1.74 ಕೋಟಿ.

**ಶ್ರೀ ಸರಸ್ವತಿ ಸೌಹಾರ್ದ ಪತ್ತಿನ ಸಹಕಾರಿ ನಿ ಪುತ್ತೂರು.**
**ಶೇರು ಬಂಡವಾಳ** : ರೂ 1.54 ಕೋಟಿ. **ಸದಸ್ಯರು** : 16500.
**ಠೇವಣಿಗಳು** : 81.85 ಕೋಟಿ **ಸಾಲಗಳು** : ರೂ 64.67ಕೋಟಿ.
**ದುಡಿಯುವ ಬಂಡವಾಳ** : ರೂ 87.37 ಕೋಟಿ.
**ಲಾಭ** : ರೂ 1.40 ಕೋಟಿ.
ಗ್ರಾಸ ಎನ್.ಪಿ.ಎ. 1.52 % . ನೆಟ್.ಎನ್.ಪಿ.ಎ.0.95%

**ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ಮಸ್ಕಿ.**
**ನಿವ್ವಳ ಲಾಭ** : ರೂ. 1 ಕೋಟಿ 24 ಲಕ್ಷ 52 ಸಾವಿರ
**ಶೇರು ಬಂಡವಾಳ** : ರೂ. 1 ಕೋಟಿ 47 ಲಕ್ಷ 79 ಸಾವಿರ
**ಠೇವಣಿಗಳು** : ರೂ. 69 ಕೋಟಿ 92 ಲಕ್ಷ 58 ಸಾವಿರ
**ಸಾಲ & ಮುಂಗಡಗಳು** : 50 ಕೋಟಿ 69 ಲಕ್ಷ 47 ಸಾವಿರ **ದುಡಿಯುವ ಬಂಡವಾಳ** : ರೂ. 56 ಕೋಟಿ 56 ಲಕ್ಷ 76 ಸಾವಿರ
**ಆರ್ಥಿಕ ವಹಿವಾಟು** : (**Turnover**) : ರೂ.733 ಕೋಟಿ
**ಒಟ್ಟು ವ್ಯವಹಾರ** (**Total Business**) : 121 ಕೋಟಿ
**ಸಾಲ ವಸೂಲಾತಿ ಪ್ರಮಾಣ** : ಶೇ. 96.5
Gross NPA ಶೇ. 2.15
**ಹೂಡಿಕೆಗಳು** : ರೂ. 19 ಕೋಟಿ 26 ಲಕ್ಷ 05 ಸಾವಿರ
**CD RATIO** : 72.50%

**ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿ ನಿ.,**
**ಪಾಲು ಬಂಡವಾಳ** : ರೂ. 1.05 ಕೋಟಿ
**ಠೇವಣಿಗಳು** : ರೂ. 21.56 ಕೋಟಿ
**ಸಾಲಗಳು** : ರೂ. 17.52 ಕೋಟಿ
**ಲಾಭ** : ರೂ. 48.78 ಲಕ್ಷ

**ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ ಬೆಂಗಳೂರು.**
**ಸದಸ್ಯರು** : 6909
**ಪಾಲು ಬಂಡವಾಳ** : ರೂ. 493.15 ಲಕ್ಷಗಳು.
**ಠೇವಣಿಗಳು** : ರೂ. 9435.95 ಲಕ್ಷಗಳು.
**ಸಾಲಗಳು** : ರೂ. 6785.28 ಲಕ್ಷಗಳು.
**ದುಡಿಯುವ ಬಂಡವಾಳ** : ರೂ. 11028.59 ಲಕ್ಷಗಳು.
**ನಿವ್ವಳ ಲಾಭ** : ರೂ. 188.79 ಲಕ್ಷ
**ಗ್ರಾಸ್ ಎನ್.ಪಿ.ಎ.** : 1.25 % ನೆಟ್ ಎನ್.ಪಿ.ಎ 0%

**ಸಹನಾ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ ಹಾಸನ.**
**ಠೇವಣಿಗಳು** : ರೂ. 8.94 ಕೋಟಿ
**ಸಾಲಗಳು** : ರೂ. 4.86 ಕೋಟಿ.
**ಲಾಭ** : ರೂ 35.51 ಲಕ್ಷ

**ಸಂಡೂರು ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಸಂಡೂರು.**
**ಲಾಭ** : ರೂ. 1.12 ಕೋಟಿ

**ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಮಾನ್ವಿ.**
**ಲಾಭ** : ರೂ. 17,645,207/-

**ತುಂಗಭದ್ರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು.**
**ಲಾಭ** : ರೂ. 45,00,500/-

**ಶ್ರೀ ವಾಸವಿ ಪತ್ತಿನ ಸೌಹಾರ್ದ ಸಹಕಾರಿ ನಿ., ಕಾರಟಗಿ.**
**ಲಾಭ** : ರೂ. 46,00,000/-

**The Dharwad Urban Credit Souharda Sahakari ltd.,**
**Share Capital** : 22,95,000
**Working Capital** : 32,72,04,295
**Deposit** : 29,19,64,889
**Profit** : 1,34,19,173

**ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿ ನಿ ಗುಲ್ಬರ್ಗಾ**
**ಶೇರು ಬಂಡವಾಳ** : ರೂ. 62,31,300.
**ಠೇವಣಿಗಳು** : ರೂ. 6,61,17,444.
**ಸಾಲಗಳು** : ರೂ 5,70,45,651
**ದುಡಿಯುವ ಬಂಡವಾಳ** : ರೂ.7,735,55,590
**ಲಾಭ** : ರೂ.35,67,771.

**ಶ್ರೀ ಬೀರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಎಕ್ಸಂಬ**
**ಸದಸ್ಯರು** : 67,593. **ಶೇರು ಬಂಡವಾಳ** : ರೂ. 7,07,48,500.
**ಠೇವಣಿಗಳು** : ರೂ. 558,89,95,208
**ಶಾಖೆಗಳು** : 85. **ಹೂಡಿಕೆಗಳು** : 152,86,39,590-00
**ಸಾಲ ಮತ್ತು ಮುಂಗಡಗಳು** : ರೂ. 421,17,23,051-00
**ನಿವ್ವಳ ಲಾಭ** : ರೂ. 5,11,77,670-66

Financial Data of PSMCL for the financial year 2013-14
**Share Capital** : Rs. 1.57 Crores
Deposits : Rs.76.43 Crores
**Loans** : Rs.78.60 Crores
**Working Capital** : Rs.169.35 Crores
**Profit** : Rs. 2.26 Crores **N P A** : 0.25%

**ಸುರಕ್ಷಾ ಸೌಹಾರ್ದ ಸಹಕಾರಿ ನಿ ಉಡುಪಿ**
**ಶೇರು ಬಂಡವಾಳ** : ರೂ. 7,65,000
**ಠೇವಣಿಗಳು** : ರೂ. 11,23,07,525-14
**ಸಾಲಗಳು** : 8,05,31,852-36
**ಲಾಭ** : 5,05,600-00

# ಭಾರತದ ಅರ್ಥವ್ಯವಸ್ಥೆಯಲ್ಲಿ ಸಹಕಾರಕ್ಕೆ ಪ್ರಮುಖ ಸ್ಥಾನ ಗ್ರಾಮೀಣ ಸಹಕಾರಿ ಸಾಲ ವಿತರಣಾ ವ್ಯವಸ್ಥೆ – ಬಲಪಡಿಸುವಿಕೆ ಮತ್ತು ಪುನಶ್ಚೇತನ

**ಡಾ. ದೀಪಾಲಿ ಪಂಥ್ ಜೋಷಿ,** ಕಾರ್ಯನಿರ್ವಾಹಕ ನಿರ್ದೇಶಕರು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ

(ದಿನಾಂಕ 21 ಮಾರ್ಚ್ 2014ರಂದು ಮುಂಬಯಿನಲ್ಲಿ ನಡೆದ ರಾಜ್ಯ ಸಹಕಾರಿ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ರಾಷ್ಟ್ರೀಯ ಸಭೆಯಲ್ಲಿ ಮಂಡಿಸಿದ ಭಾಷಣದ ಆಯ್ದ ಪ್ರಮುಖ ವಿಷಯ)

ಅನುವಾದ : ದಿವ್ಯ ಟಿ.

ಆರಂಭದಿಂದಲೂ ಭಾರತೀಯ ಸಹಕಾರ ಚಳುವಳಿಯನ್ನು ಗ್ರಾಮೀಣ ಸಾಲ ವ್ಯವಸ್ಥೆಯ ಜೊತೆಗೆ ಅಭಿವೃದ್ಧಿ ಯೋಜನೆ ಉದ್ದೇಶಗಳನ್ನು ಒಗ್ಗೂಡಿಸಿ ಪ್ರಾರಂಭಿಸಲಾಗಿದೆ. ಈ ನಿಟ್ಟಿನಲ್ಲಿ ಆರ್‌ಬಿಐ ಪ್ರಮುಖ ಪಾತ್ರವನ್ನು ವಹಿಸಿದ್ದು, ಕೃಷಿ ಸಾಲ ವಿಭಾಗದ ಸ್ಥಾಪನೆಗೆ ಮತ್ತು ಸಹಕಾರಿಗಳಿಗೆ ಪುನಶ್ಚೇತನ ಸೌಲಭ್ಯಗಳನ್ನು ವಿಸ್ತರಿಸುವ ಸಲುವಾಗಿ 1934ರ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆಯಲ್ಲಿ ನಿರ್ದಿಷ್ಟ ನಿಬಂಧನೆಗಳನ್ನು ಮಾಡಲಾಯಿತು. ಆರ್‌ಬಿಐಯು ಪ್ರತಿ ಪ್ರಾಂತ್ಯದಲ್ಲಿ ಋತುಕಾಲಿಕ ಕೃಷಿ ಕಾರ್ಯಗಳಿಗಾಗಿರುವ ಪ್ರಾಂತೀಯ ಸಹಕಾರಿ ಬ್ಯಾಂಕ್, ಕೇಂದ್ರ ಸಹಕಾರಿ ಬ್ಯಾಂಕುಗಳು, ಮಾರ್ಕೆಟಿಂಗ್ ಸಂಸ್ಥೆಗಳು ಮತ್ತು ಪ್ರಾಥಮಿಕ ಕೃಷಿ ಸಾಲದ ಸಂಸ್ಥೆಗಳನ್ನು ಬಲಪಡಿಸುವ ಮತ್ತು ಖಾತರಿಪಡಿಸುವ ಕಾರ್ಯಸಾಧ್ಯತೆಗೆ ಮಹತ್ವ ನೀಡಿತ್ತಾ ಬಂದಿದೆ.

## ಸಹಕಾರಿ ಸಂಸ್ಥೆಗಳ ಪಾತ್ರ :

ಭಾರತದಲ್ಲಿ ಗ್ರಾಮೀಣ ಪತ್ತಿನ ಸಹಕಾರಿ ಸಂಸ್ಥೆಗಳು ಮೂಲತಃ ಸಣ್ಣ ವರ್ಗಗಳ ಜನರ ಸಂಪನ್ಮೂಲಗಳನ್ನು ಸಂಚಯಿಸುವ ಮತ್ತು ಅವರಿಗೆ ಹಣಕಾಸಿನ ಸೇವೆಗಳನ್ನು ಅಗ್ಗವಾಗಿ ಮತ್ತು ವೆಚ್ಚ–ಪರಿಣಾಮಕಾರಿಯನ್ನು ಪಡೆಯಲು ಒದಗಿಸುವ ಕಾರ್ಯವಿಧಾನವಾಗಿ ರೂಪಿಸಲಾಯಿತು. ಪ್ರಜಾಪ್ರಭುತ್ವದ ಲಕ್ಷಣಗಳಲ್ಲಿ, ಕೆಳದರ್ಜೆಯ ನಿರುಪಯುಕ್ತ ಭೂಮಿಯ ಅಭಿವೃದ್ಧಿಗೆ, ಉತ್ಪಾದಕತೆಯ ಹೆಚ್ಚಳಕ್ಕೆ, ಆಹಾರ ಭದ್ರತೆಯನ್ನು ಒದಗಿಸಲು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗದ ಅವಕಾಶಗಳನ್ನು ಒದಗಿಸುವಲ್ಲಿ, ಬಡ ಮತ್ತು ದುರ್ಬಲ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಖಚಿತಪಡಿಸುವಲ್ಲಿ ಚಳುವಳಿಯು ಪರಿಣಾಮಕಾರಿ ಸಾಧನವಾಗಿದೆ. ಇದರಿಂದಾಗಿ, ಸಹಕಾರವು ಭಾರತೀಯ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ಪ್ರಮುಖ ಸ್ಥಾನವನ್ನು ಪಡೆದಿದೆ.

ಸಹಕಾರಿ ಸಂಸ್ಥೆಗಳನ್ನು ಮೊದಲು ಔಪಚಾರಿಕ ಸಂಸ್ಥೆಗಳೆಂದು ರೂಪಿಸಿ, ಗ್ರಾಮೀಣ ಭಾರತದಲ್ಲಿ ಸಾಲವನ್ನು ಒದಗಿಸಲು ಅಭಿವೃದ್ಧಿ ಪಡಿಸಲಾಯಿತು. ಅವುಗಳ ಸಾಲ ವಿತರಣೆಯಿಂದ ರೈತರು ಸಕ್ರಿಯವಾಗಿ ಅವರ ಉತ್ಪಾದನೆಯ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಪ್ರಮುಖ



ಸಾಧನವಾಯಿತು. ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನೆ ಮತ್ತು ಉತ್ಪಾಕತೆಯು ಹೆಚ್ಚಾಯಿತು.

## ಅಲ್ಪಾವಧಿ ಸಹಕಾರಿಯ ಸಾಲ ರಚನೆ (STCCS-Short Term Cooperative Credit Structure) :

ಆರಂಭದಿಂದಲೂ, ಸಹಕಾರಿ ಸಂಸ್ಥೆಗಳು ವಿಶೇಷವಾಗಿ ಕೃಷಿ ಕ್ಷೇತ್ರಕ್ಕೆ ಕೈಗೆಟುಕುವ ವೆಚ್ಚದಲ್ಲಿ ಸಾಂಸ್ಥಿಕ ಸಾಲವು ಲಭ್ಯವಾಗುವಂತೆ ಮಾಡಿದೆ. ಜೊತೆಗೆ ಇತರ ಹಣಕಾಸು ಸೇವೆಗಳಿಗಿಂತ ಅಲ್ಪಾವಧಿ ಗ್ರಾಮೀಣ ಸಹಕಾರಿ ಸಾಲ ರಚನೆ (STCCS)ಯು ಮುಖ್ಯವಾಗಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಉತ್ಪಾದನೆಗೆ ಸಾಲವನ್ನು ಒದಗಿಸುತ್ತಿದೆ.

## ಕೃಷಿ ಸಾಲ ವಿಸ್ತರಣೆಯಲ್ಲಿ ಗ್ರಾಮೀಣ ಸಹಕಾರಿ ಬ್ಯಾಂಕುಗಳ ಭಾಗವಹಿಸುವಿಕೆ :

ಕೃಷಿಗೆ ಸಾಲ ವಿಸ್ತರಿಸುವಲ್ಲಿ ಸರ್ಕಾರದ ಪರಿಣಾಮಕಾರಿ ನೀತಿಯಿಂದಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಸಾಂಸ್ಥಿಕ ಸಾಲ ನೀಡಿಕೆಯು ಕಳೆದ ಎರಡು ದಶಕಗಳಲ್ಲಿ ಗಮನಾರ್ಹ ಬೆಳವಣಿಗೆಯನ್ನು ದಾಖಲಿಸಿದೆ. 1990ರಲ್ಲಿ ಸಹಕಾರಿ ಕ್ರೆಡಿಟ್ ಸಂಸ್ಥೆಗಳು ಸಾಲ ನೀಡಿಕೆ ಮೂಲಕ

ಬ್ಯಾಂಕ್‌ಗಳಿಗಿಂತ ಹೆಚ್ಚು ವೇಗವಾಗಿ ಬೆಳೆದಿವೆ. ಆದರೆ, 2007–08ರಿಂದ ಅದರ ಪಾಲು ಇಳಿಮುಖವಾಗುತ್ತಿದೆ. ಈ ಕುಸಿತದ ಹೊರತಾಗಿಯೂ, ಸಹಕಾರಿ ಸಂಸ್ಥೆಗಳು ಸಾಲಗಾರರ ಸಂಖ್ಯೆ ಮತ್ತು ವೈಯಕ್ತಿಕ ಸಾಲಗಳ ಗಾತ್ರದಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ರೈತರಿಗೆ ಕೃಷಿ ಸಾಲದ ಪ್ರಮುಖ ಮೂಲವಾಗಿ ಉಳಿದಿದೆ.

### ಸಹಕಾರಿ ಸಂಸ್ಥೆಗಳ ಸಮಸ್ಯೆಗಳು :

ಉತ್ತಮ ಪ್ರಭಾವ ಮತ್ತು ಕಾರ್ಯಾಚರಣೆಗಳ ಪರಿಮಾಣದ ಹೊರತಾಗಿಯೂ, ಗ್ರಾಮೀಣ ಪತ್ತಿನ ಸಹಕಾರಿ ಸಂಸ್ಥೆಗಳ ಆರೋಗ್ಯವು ಬೃಹತ್ ಪ್ರಮಾಣದಲ್ಲಿ ಹಾಳಾಗಿದೆ. ಸಂಸ್ಥೆಗಳ ಅದಕ್ಷ ಆಡಳಿತದ ಮೂಲಭೂತ ದೌರ್ಬಲ್ಯಗಳು, ಕಾರ್ಯಾಚರಣೆಯ ಅದಕ್ಷತೆ ಮತ್ತು ಅದರ ಆರ್ಥಿಕ ಆರೋಗ್ಯದಲ್ಲುಂಟಾದ ದುರ್ಬಲತೆ ಮುಂತಾದ ಸಮಸ್ಯೆಗಳು ಆವರಿಸಿದೆ. ಕಡಿಮೆ ಸಾಲಪಡೆಯುವ ಸದಸ್ಯತ್ವ, ಕಡಿಮೆ ಸಂಪನ್ಮೂಲ ನೆಲೆ, ಪ್ರಜಾಪ್ರಭುತ್ವೀಕರಣ ಮತ್ತು ವೃತ್ತಿಪರತೆಯ ಕೊರತೆ, ಹೆಚ್ಚು ಬಾಕಿಯಿರುವುದು ಮತ್ತು ಸಾಲ ವಸೂಲಾತಿಯಲ್ಲಿ ವಿಫಲತೆ ಹೀಗೆ ಹಲವಾರು ಅಂಶಗಳು ಸಹಕಾರಿ ಸಂಸ್ಥೆಗಳ ಹಣಕಾಸು ಸುಸ್ಥಿತಿ ಕ್ಷೀಣಿಸುವುದಕ್ಕೆ ಕಾರಣವಾಗಿದೆ. ಗ್ರಾಮೀಣ ಭಾರತದಲ್ಲಿ ಸಾಲದ ಅಗತ್ಯಗಳು ವಿಶೇಷವಾಗಿ ಸಂಪನ್ಮೂಲಗಳ ಕೊರತೆ ಮತ್ತು ಬಡ ರೈತರಿಗೆ ಪೂರೈಸುವಂತೆ ಸಹಕಾರ ಚಳುವಳಿಯನ್ನು ಬಲಪಡಿಸುವ ತುರ್ತು ಅವಶ್ಯಕತೆ ಇದೆ. ಎಲ್ಲಾ ಹಂತಗಳಲ್ಲಿಯೂ ಸಹಕಾರಿ ಸಂಸ್ಥೆಗಳ ಪುನಶ್ಚೇತನ ಮತ್ತು ಬಲಪಡಿಸುವಿಕೆಯು ಅಪೇಕ್ಷಣಿಯ ಮಾತ್ರವಲ್ಲ ಯಥೋಚಿತವಾಗಿರಬೇಕು. ಸಹಕಾರ ಸಂಸ್ಥೆಗಳಲ್ಲಿನ ಸಮಸ್ಯೆಗಳೆಂದರೆ;

- ಅದಕ್ಷ ಆಡಳಿತ.
- ವಿವೇಚನಾಯುತ ಬಡ್ಡಿದರ ನೀತಿಗಳ ಅನುಪಸ್ಥಿತಿ.
- ಮಾನವ ಸಂಪನ್ಮೂಲ ನೀತಿಗಳು ಮತ್ತು ವೃತ್ತಿಪರತೆಯ ಕೊರತೆ.
- ಸಾಲ ವಸೂಲಾತಿಯ ಕೊರತೆ.
- ಅಸಮರ್ಪಕ ಆಂತರಿಕ ನಿಯಂತ್ರಣ ಮತ್ತು ಲೆಕ್ಕಪರಿಶೋಧನೆ.
- ಸದಸ್ಯರ ಭಾಗವಹಿಸುವಿಕೆ ಕೊರತೆ.
- ಬದಲಾವಣೆಗಳ ಜೊತೆಗೆ ಹೊಂದಿಕೊಳ್ಳುವಲ್ಲಿ ವಿಫಲತೆ.
- ಉಭಯತ್ವ ನಿಯಂತ್ರಣ.

### ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಪುನಶ್ಚೇತನದ ಅಗತ್ಯಗಳು :

ಭಾರತ ದೇಶವು 110 ಕೋಟಿಗಿಂತಲೂ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು, ಅದರಲ್ಲಿ ಸುಮಾರು 70 ಕೋಟಿ ಜನರು 6 ಲಕ್ಷ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ದೇಶದಲ್ಲಿ ಸುಮಾರು 92,000 ಕಂಅಖ (ಕಡುಟಚಿಡಿಥಿ ೦ರಡುಭಿಣಟಣಣಡಿಜ ಅಡಿಜಜುಣ ಖಂಭಿಜಣುಭ) ಹೊಂದಿದ್ದು, ಸರಾಸರಿ ಪ್ರತಿ 8ನೇ ಗ್ರಾಮದಲ್ಲಿ ಸಹಕಾರಿ ಸಾಲ ಮಳಿಗೆಯು ಅಸ್ತಿತ್ವದಲ್ಲಿದೆ. ಇದು ಸಹಕಾರಿ ಸಂಸ್ಥೆಗಳ ಪಾತ್ರದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಸಹಕಾರಿ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತರಲು ಹಲವಾರು ಸಮಿತಿಗಳನ್ನು ಸ್ಥಾಪಿಸಲಾಯಿತು. ವೈದ್ಯನಾಥನ್ ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ, ಭಾರತ ಸರ್ಕಾರವು ಜನವರಿ 2006ರಲ್ಲಿ, ಅಲ್ಪಾವಧಿಯ ಗ್ರಾಮೀಣ ಸಹಕಾರಿ ಸಾಲ ರಚನೆಗೆ ಪುನಶ್ಚೇತನದ ಪ್ಯಾಕೇಜನ್ನು ಹೊರತಂದಿತು. ಕಾರ್ಯಪಡೆಯು ಸಹ ಆಡಳಿತದಲ್ಲಿ ವ್ಯಾಪಕ ಸುಧಾರಣೆಗಳಿಗೆ ಸಲಹೆ ನೀಡಿದೆ ಮತ್ತು ಖಙಅಅಖ ನಿರ್ವಹಣೆಯು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಮತ್ತು ಸ್ವತಃ ಖಙಅಅಖ ಜಂಟಿಯಾಗಿ ಬಂಡವಾಳೀಕರಣಕ್ಕಿಂತ ಮುಂಚೆ ಆಯಾ ರಾಜ್ಯಗಳು ಸಹಕಾರಿ ಸಂಸ್ಥೆಗಳ ಕಾಯಿದೆಗಳನ್ನು ಒಂದು ಬಾರಿ ಅವಶ್ಯಕವಾಗಿ ತಿದ್ದುಪಡಿ ಮಾಡುವ ಶಿಫಾರಸ್ಸನ್ನು ಸಹ ಒಳಗೊಂಡಿತ್ತು. ಸಹಕಾರಿ ಕ್ರೆಡಿಟ್ ಸಂಸ್ಥೆಗಳ ಪುನಶ್ಚೇತನದ ಕ್ರಮಗಳೆಂದರೆ;

- ಗ್ರಾಮೀಣ ಸಹಕಾರಿ ಬ್ಯಾಂಕುಗಳಿಗೆ ಪರವಾನಗಿ.
- ಇತ್ತೀಚಿನ ನೀತಿ ಉಪಕ್ರಮಗಳು – ಕೋರ್ ಬ್ಯಾಂಕಿಂಗ್ ಪರಿಹಾರ ಅನುಷ್ಠಾನ.
- ಬಂಡವಾಳ ಪರ್ಯಾಪ್ತಿ ಮೇಲಿನ ವಿವೇಚನಾಯುತ ರೂಢಿಗಳು.
- ಸಾಲ ಮಾಹಿತಿ ಕಂಪನಿಗಳಲ್ಲಿ ಸದಸ್ಯತ್ವ.
- ರಾಜ್ಯ ಸಹಕಾರಿ ಬಾಂಕುಗಳ – ಮಾರ್ಗದರ್ಶಿ ಪಾತ್ರ.

### ಮುಂದಿನ ದಾರಿ :

ಸಹಕಾರಿ ಸಂಸ್ಥೆಗಳು ಸದಸ್ಯ–ಸ್ವಾಮ್ಯದ ಮತ್ತು ಸದಸ್ಯ–ನಿಯಂತ್ರಿತ ಸಂಸ್ಥೆಗಳ ಅಂತರ್ಗತ ಪ್ರಯೋಜನಗಳನ್ನು ಹೊಂದಿವೆ. ನಿರಂತರವಾದ ಸರ್ಕಾರಗಳು ಗ್ರಾಮೀಣ ಜನಸಮೂಹಕ್ಕೆ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಮತ್ತು ಬಡತನ ನಿರ್ಮೂಲನೆ ಮಾಡುವಲ್ಲಿ ಮತ್ತು ಗ್ರಾಮೀಣ ಆರ್ಥಿಕ ಅಭಿವೃದ್ಧಿಯ ಕೊಡುಗೆಯಲ್ಲಿ ತಮ್ಮ ಪಾತ್ರವನ್ನು ಒಪ್ಪಿಕೊಂಡಿದೆ ಮತ್ತು ರಾಜ್ಯ–ಬಡ್ತಿ ನೀತಿಗಳ ಭಾಗವಾಗಿ ಬೆಂಬಲ ಮತ್ತು ಸಹಾಯವನ್ನು ಒದಗಿಸಿದೆ. ಆದರೆ, ಸಹಕಾರಿ ಸಂಸ್ಥೆಗಳು ಈ ಮೇಲೆ ಚರ್ಚಿಸಿದ ನಿರ್ಬಂಧಗಳನ್ನು ಮತ್ತು ಅಸಮರ್ಪಕತೆಗಳನ್ನು ಪರಿಹರಿಸಲು ಸ್ಥಿರ ಪ್ರಯತ್ನಗಳನ್ನು ಮಾಡಬೇಕು.

ಒಟ್ಟಾರೆಯಾಗಿ, ಸಹಕಾರಿ ಸಂಸ್ಥೆಗಳು ಉತ್ತಮ ಸಾಂಸ್ಥಿಕ ಆಡಳಿತ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಅಭ್ಯಾಸ ಮಾಡಿಕೊಳ್ಳಬೇಕು. ಈ ಸಂಸ್ಥೆಗಳು ಸಂಪೂರ್ಣವಾಗಿ 'ಸದಸ್ಯ ಚಾಲಿತ'ವಾಗಿದ್ದು, ಮಾತು ಮತ್ತು ಕಾರ್ಯದಲ್ಲಿ ಸಹಕಾರ ತತ್ವವಿರಬೇಕು. ಸಹಕಾರಿ ಸಂಸ್ಥೆಗಳು ಸಿಬ್ಬಂದಿಗಳಿಗೆ ವೃತ್ತಿಪರತೆಯನ್ನು ಪರಿಚಯ ಮಾಡಲೇಬೇಕು ಮತ್ತು ಸೂಕ್ತ ತರಬೇತಿಗಳನ್ನು ನೀಡುವ ಮೂಲಕ ನೌಕರರ ಕೌಶಲ್ಯಗಳನ್ನು ಸುಧಾರಿಸಬೇಕು. ಅವುಗಳು ಸಾಲಗಳು ಮತ್ತು ಹೂಡಿಕೆಗಳಿಗೆ ಸೂಕ್ತ ಚೌಕಟ್ಟು ಮತ್ತು ದೂರದೃಷ್ಟಿಯ ವಿವೇಚನಾಯುತ ನೀತಿಗಳನ್ನು ರೂಪಿಸಬೇಕು. ಸಹಕಾರಿ ಸಂಸ್ಥೆಗಳು ತಮ್ಮ ಜಡತ್ವವನ್ನು ನೀಗಿಸಿಕೊಳ್ಳಬೇಕು, ಪ್ರತಿರೋಧವನ್ನು ಬದಲಾಯಿಸಿಕೊಳ್ಳಬೇಕು ಮತ್ತು ತಂತ್ರಜ್ಞಾನ ಪ್ರೇರಿತವನ್ನು ಹೊರಹೊಮ್ಮಿಸಬೇಕು, ಸಂಸ್ಥೆಗಳನ್ನು ಉತ್ತಮವಾಗಿ ಕಾರ್ಯನಿರ್ವಹಿಸುವುದರ ಮೂಲಕ ಸಾರ್ವಜನಿಕರಿಗೆ ವಿಶ್ವಾಸವನ್ನು ಮತ್ತು ಅವರ ಬದ್ಧತೆಯನ್ನು ಬೆಳೆಸಬೇಕು. ■

# ಗೆಲ್ಲುವ, ಗೆಲ್ಲಿಸುವ ದಾರಿಯ ಅನ್ವೇಷಣೆ

▸▸ ಆರ್ನಂದನ್, ಯಲ್ಲಾಪುರ

ನಮ್ಮೂರ ಯಂಕ್ಟ ಅದ್ಭುತ ಮಾತುಗಾರ, ಏನನ್ನೇ ಕೊಟ್ಟರೂ ಮಾರಾಟ ಮಾಡಬಲ್ಲ. ಎಲ್ಲಿ ಬೇಕಾದರೂ ಬದುಕಬಲ್ಲ. ಯಾವ ವಿಷಯದ ಬಗ್ಗೆ ಬೇಕಾದರೂ ಮಾತಾಡಬಲ್ಲ. ರಿಸೆಶ್ಶನ್, ಷೇರು ಮಾರುಕಟ್ಟೆಯಿಂದ ರಸಗೊಬ್ಬರ, ಮಣ್ಣಿನ ಫಲವತ್ತತೆಯವರೆಗೆ ಎಲ್ಲ ವಿಷಯಗಳೂ ಅವನಿಗೆ ಗೊತ್ತು. ಜನರನ್ನ ಸೆಳೆಯುವುದು, ಸಂವಹನ ಮಾಡುವುದು, ಯಾವುದೇ ವಿಷಯದ ಬಗ್ಗೆ ಮಾತಾಡುವುದು ಇದರಲ್ಲಿ ಅವನು ತುಂಬಾ ನಿಪುಣ. ಆದರೇನು, ಕಳೆದ 20 ವರ್ಷಗಳಿಂದಲೂ ಅವನು ಸೇಲ್ಸ್‌ಮೆನ್ ಆಗಿಯೇ ದುಡಿಯುತ್ತಿದ್ದಾನೆ.

ನಮ್ಮೂರ ಬಡ ಮೇಸ್ತ್ರ ಮಗ ತುಂಬಾ ಬುದ್ಧಿವಂತ. ನಾವೆಲ್ಲ ಕಂಪ್ಯೂಟರ್ ಎಂದರೇನು ಎಂದು ತಿಳಿಯುವ ಹೊತ್ತಿಗಾಗಲೇ ಅವನು ಕಂಪ್ಯೂಟರ್ ಲಾಂಗ್ವೇಜ್‌ಗಳ ಬಗ್ಗೆ ಮಾತಾಡುತ್ತಿದ್ದ. ನಾವೆಲ್ಲಾ ಹಾಯಾಗಿ ಅಪ್ಪ ಕೊಟ್ಟ ಪಾಕೇಟ್ ಮನಿಯಲ್ಲಿ ಶೇಂಗಾ ತಿನ್ನುತ್ತಿದ್ದರೆ, ಅವನು ಪೇಪರ್ ಹಾಕಿ ಬಂದ ದುಡ್ಡಿನಲ್ಲಿ ಹೆನ್ರಿ ಫೋರ್ಡ್ ಬಯಾಗ್ರಫಿ ಖರೀದಿಸುತ್ತಿದ್ದ. ನಾವು ಡಿಗ್ರಿ ಓದುವುದು ಯಾವ ಕಾಲೇಜಿನಲ್ಲಿ ಎಂದು ಯೋಚಿಸುತ್ತಿದ್ದರೆ ಅವನಾಗಲೇ ಪಾರ್ಟ್ ಟೈಮ್ ಬಿಜ್ನೆಸ್ ಶುರು ಮಾಡುವುದಾ ಇಲ್ಲಾ ಕೆಲಸ ಮಾಡುವುದಾ ಎಂದು ಯೋಜನೆ ರೂಪಿಸುತ್ತಿದ್ದ. ಈಗಾ ನಾವೆಲ್ಲ ಬೆಳಿಗ್ಗೆ ಕಛೇರಿಗೆ ಹೋಗಿ ಸಂಜೆ ಸುಸ್ತಾಗಿ ಮನೆಗೆ ಹಿಂತಿರುಗುತ್ತಾ, ಮಾಸಾಂತ್ಯದ ಖಾಲಿ ಬ್ಯಾಂಕ್ ಅಕೌಂಟ್ ಶಪಿಸುತ್ತಾ ಇದ್ದರೆ ಅವನಾಗಲೇ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿದ್ದಾನೆ.

ಎಲ್ಲಾ ಕ್ಲಾಸುಗಳಲ್ಲಿ, ತರಬೇತಿಗಳಲ್ಲಿ ನಾವೆಲ್ಲಾ ಪದೇ ಪದೇ ಕೇಳುತ್ತೇವೆ, ಇದು ಸ್ಪರ್ಧಾತ್ಮಕ ಯುಗ, ಇಲ್ಲಿ ತಿಳಿದಷ್ಟು ಕಡಿಮೆ. ಗೆಲ್ಲುವುದಾದರೆ ಓದಬೇಕು, ಓಡಬೇಕು ಇತ್ಯಾದಿ ಇತ್ಯಾದಿ. ಓದಿದವರು ಓಡಿದವರು ಎಲ್ಲಾ ಗೆದ್ದಿದ್ದಾರಾ..? ಓದಿದ ನಾವೆಲ್ಲಾ ಏನಾಗಿದ್ದೇವೆ. ಓದದ ಅವರೆಲ್ಲಾ ಏನಾಗಿದ್ದಾರೆ..?? ಶಾಲೆಯಿಂದ ಹೊರಹಾಕಲ್ಪಟ್ಟವರು ದೇಶದ ಆರ್ಥಿಕತೆಗೆ ಬೆನ್ನೆಲಬಾಗುವಂತ ಉದ್ಯಮವನ್ನ ಸ್ಥಾಪಿಸಿದ್ದಾರೆ, ಓದಲು ನಾಲಾಯಕ್ಕು ಎನಿಸಿಕೊಂಡವರು ದೊಡ್ಡ ವಿಜ್ಞಾನಿಯಾಗಿದ್ದಾರೆ. ವೇಗವಾಗಿ ಓಡಿದ ಸತ್ಯಂ ಕಂಪ್ಯೂಟರ್ಸ್ ಏನಾಯ್ತು ಎನ್ನುವುದು ನಮಗೆ ಗೊತ್ತಿದೆ. ಓಡುತ್ತಿದ್ದ ಅಮೇರಿಕದ ಆರ್ಥಿಕತೆ ಕುಸಿದು ಬಿದ್ದಿದ್ದು ಕಣ್ಮುಂದೆಯೇ ಇದೆ. ಹಾಗಾದರೆ ಗೆದ್ದಿದ್ದು ಯಾರು..?? ಗೆಲ್ಲಿಸಿದ್ದು ಯಾವುದು..??

ಯಂಕ್ಟ ಹಾಗೂ ಮೇಸ್ತ್ರ ಮಗ ಇಬ್ಬರೂ ಬುದ್ದಿವಂತರು. ಜ್ಞಾನವನ್ನೂ ಆ ಮೂಲಕ ವಿವಿಧ ಕೌಶಲ್ಯವನ್ನೂ ಗಳಿಸಿಕೊಂಡು ನಮ್ಮ ಅಚ್ಚರಿಗೆ ಕಾರಣರಾದವರು. ಹಾಗೆ ನೋಡಿದರೆ ಮೇಸ್ತ್ರ ಮಗನಿಗಿಂತಲೂ ಹೆಚ್ಚು ವಿಷಯ ಯಂಕ್ಟನಿಗೆ ಗೊತ್ತು. ನಿಮಗೆ ಇಬ್ಬರೂ ಒಟ್ಟಿಗೆ ಸಿಕ್ಕರೆ ನೀವು ಯಂಕ್ಟನನ್ನೇ ಮೆಚ್ಚುತ್ತೀರಿ. ಆದರೆ ಗೆಲುವಿನ ಆಯ್ಕೆಯಲ್ಲಿ ವ್ಯತ್ಯಾಸ ಆದದ್ದು ಹೇಗೆ? ಯಂಕ್ಟನ ಸೋಲಿಗೂ, ಮೇಸ್ತ್ರ ಮಗನ ಗೆಲುವಿಗೂ ಕಾರಣ ಏನು?? ನಾವು ಸಾಮಾನ್ಯ ಜನ ಅದೃಷ್ಟ ಎಂದು ಬಿಡುತ್ತೇವೆ. ಅಸಾಮರ್ಥ್ಯವನ್ನು ಮುಚ್ಚಿಕೊಳ್ಳೋಕೆ ಇನ್ನು ಚೆನ್ನಾಗಿರೋ ಶಬ್ದ ಇಲ್ವಲ್ಲ. ಒಂದಿಷ್ಟು ಯೋಚನೆ ಮಾಡಿದರೆ ಮತ್ತೇನೋ ಸಿಗುತ್ತೆ. ಸಿಕ್ಕವರು, ಸಿಕ್ಕಿದ್ದು ಅರ್ಥವಾದವರು ಗೆಲ್ತಾರೆ.




ನಮ್ಮ ಮೇಷ್ಟ್ರು ಹೇಳುತ್ತಿದ್ದರು, ಗೆಲ್ಲುವುದಕ್ಕೆ ಬೇಕಾಗಿರೋದು ಓದೊಂದೆ ಅಲ್ಲ, ಕೌಶಲ್ಯವೂ ಬೇಕು ಅಂತ. ಕೌಶಲ್ಯ ಬೇಕಿಲ್ಲ ಸ್ಪೀಡಾಗಿದ್ರೆ ಸಾಕು ಅಂತ ಹಿಂದಿನ ಪೀಳಿಗೆಯವರು ನಾವು ಅನ್ಕೊಂಡಿದ್ವಿ. ಹಾಗಾಗೆ ನಾವೀಗ ಮಧ್ಯಮವರ್ಗದ ಕಷ್ಟಪಟ್ಟು ದುಡಿಯುವ ನೌಕರರು. ಇದಕ್ಕಿಂತ ಹೆಚ್ಚಾಗೋಕೆ, ಇವತ್ತಿಗೆ ಕೌಶಲ್ಯವೊಂದೆ ಸಾಕಾಗೋದಿಲ್ಲ ಅಂತ ನಮ್ಮ ಮೇಷ್ಟ್ರಿಗೂ ಗೊತ್ತಾಗಿದೆ. ಅವರದೇ ಮಗ ನಿರೂಪಿಸಿದ್ದಾನೆ, ಜೊತೆಗೆ ಸ್ಪೀಡೂ ಬೇಕು ಅಂತ. ಹಾಗಾದರೆ ಕೌಶಲ್ಯವೆಂದರೇನು..? ಯಾವಾಗ ವೇಗ ಗೆಲ್ಲಿಸುತ್ತದೆ..??

**ಕೌಶಲ್ಯವೆಂದರೆ:** ಇಂದಿನ ಪ್ರಪಂಚದಲ್ಲಿ ಮಾಹಿತಿ ಸರಾಗವಾಗಿ ಹರಿಯುತ್ತಿದೆ. ಮಾಹಿತಿಯೆಂದರೆ ಜ್ಞಾನ ಅಲ್ಲವೇ. ಕೈಯಲ್ಲಿನ ಮೊಬೈಲ್, ಅಂತರ್ಜಾಲದಲ್ಲಿ ಎಲ್ಲ ಮಾಹಿತಿಯೂ ಕ್ಷಣ ಮಾತ್ರದಲ್ಲಿ ದೊರೆಯುತ್ತಿದೆ. ಹಾಗಾಗೇ ಈಗ ಜ್ಞಾನಕ್ಕೆ ಮಹತ್ವ ಕಡಿಮೆಯಾಗಿ ಕೌಶಲ್ಯ ಎನ್ನುವುದು ಪದೇ ಪದೇ ಕೇಳುತ್ತಿದೆ. ಜ್ಞಾನ ಸಂಪಾದನೆಯಿಂದ ಕೌಶಲ್ಯ ವೃದ್ಧಿಯ ಅನಿವಾರ್ಯತೆಯೆಡೆಗೆ ಆಧುನಿಕತೆ ನಮ್ಮನ್ನ ನೂಕಿದೆ ಅಂದಂತಾಯ್ತು. ಹಾಗಾದರೆ ಜ್ಞಾನ ಅಥವಾ ಮಾಹಿತಿ ಕೌಶಲ್ಯವಾಗುವ ಹಂತ ಯಾವುದು? ಸಂದರ್ಭಕ್ಕನುಸಾರವಾಗಿ ಅವರವರೇ ಅವರವರ ಕೌಶಲ್ಯ ಕಂಡುಕೊಳ್ಳಬೇಕೆನ್ನುವುದು ನಿಜವಾದರೂ ಇಲ್ಲೊಂದಿಷ್ಟು ಕೌಶಲ್ಯದ ಬಗ್ಗೆ ನೋಡೋಣ.

ಕೌಶಲ್ಯ ಬರಬೇಕೆಂದರೆ ಮೊದಲಿಗೆ ಜ್ಞಾನ ಬೇಕು. ಜ್ಞಾನ ಅಧ್ಯಯನದಿಂದ ಅನುಭವದಿಂದ ಬರುತ್ತದೆ. ಜ್ಞಾನವೆಂದರೆ ವಿಷಯ ಸಂಗ್ರಹ. ಕೌಶಲ್ಯವೆಂದರೆ, ಅರಿತ ಜ್ಞಾನವನ್ನು ಹೇಗೆ, ಎಲ್ಲಿ ಎಷ್ಟು ಪ್ರಮಾಣದಲ್ಲಿ ಬಳಸಬೇಕು ಎನ್ನುವ ತಿಳುವಳಿಕೆ. ಯಾವುದೇ ಕೆಲಸವನ್ನ ಅತ್ಯುತ್ತಮವಾಗಿ ಮಾಡಿ ಮುಗಿಸುವ ಸಾಮರ್ಥ್ಯ, ಪರಿಣಿತಿಗೆ ಕೌಶಲ್ಯ ಎನ್ನುತ್ತಾರೆ ಎನ್ನುತ್ತದೆ ಶಬ್ದಕೋಶ. "ಜ್ಞಾನವೆಂದರೆ ಮುಂದೇನು ಮಾಡುವುದು ಎಂದು ತಿಳಿಯುವುದು, ಕೌಶಲ್ಯವೆಂದರೆ ಅದನ್ನು ಹೇಗೆ ಮಾಡುವುದು ಎಂದು ತಿಳಿಯುವುದು, ಸದ್ಗುಣವೆಂದರೆ ಅದನ್ನು ಕಾರ್ಯಗತಗೊಳಿಸುವುದು" ಎಂದಿದ್ದಾರೆ ಡೇವಿಡ್ ಸ್ಟಾರ್ ಜಾರ್ಡನ್

ಕೌಶಲ್ಯ ಹೇಗೆಲ್ಲ ಬದಲಾಗುತ್ತ ಬಂದಿದೆ, ಕೌಶಲ್ಯದ ವಿಧಗಳು ಯಾವುವು ಎನ್ನುವುದನ್ನ ಮುಂದಿನ ಸಂಚಿಕೆಯಲ್ಲಿ ನೋಡೋಣ.

# ಸಹಕಾರ ಪಥದಲ್ಲಿ ಯುವಜನತೆಯ ಹೆಜ್ಜೆ

## http://www.yuvacooperative.com

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಜಗತ್ತಿನಲ್ಲಿಯೇ ಭಾರತ ಅತಿ ಹೆಚ್ಚು ಯುವ ಜನತೆಯನ್ನು ಹೊಂದಿರುವ ತಾರುಣ್ಯ ಭರಿತ ದೇಶ. ಭಾರತದ ಜನಸಂಖ್ಯೆಯಲ್ಲಿ ಶೇ.65%ರಷ್ಟು ಜನ 35ವರ್ಷಕ್ಕಿಂತ ಕಡಿಮೆ ವಯಸ್ಸಿನವರಿದ್ದಾರೆ. 2020ರ ವೇಳೆಗೆ ಭಾರತದ ಜನಸಂಖ್ಯೆಯ ಸರಾಸರಿ ವಯಸ್ಸು 29ವರ್ಷಗಳಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಇದೇ ವೇಳೆಗೆ ಚೀನಾದ ಸರಾಸರಿ ವಯಸ್ಸು 37 ಹಾಗೂ ಜಪಾನಿನ ಸರಾಸರಿ ವಯಸ್ಸು 48 ಆಗಿರುತ್ತದೆ ಎಂದು ಅಂದಾಜಿಸಲಾಗಿದೆ. ಪೂರ್ಣ ಜಗತ್ತನ್ನು ಗಣನೆಗೆ ತೆಗೆದುಕೊಂಡರೆ ಜನಸಂಖ್ಯೆಯಲ್ಲಿ ಶೇ.40%ರಷ್ಟು ಪ್ರಮಾಣದಲ್ಲಿ ಯುವಜನತೆ ವ್ಯಾಪಿಸಿದೆ. ಅದರಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಯುವ ಜನತೆ ಏಷ್ಯಾ ಖಂಡದಲ್ಲಿದ್ದಾರೆ. ಇವಿಷ್ಟು ಯುವ ಜನತೆಯ ಕುರಿತ ಅಂಕಿ ಅಂಶಗಳಾದವು. ಆದರೆ, ಸಾಧನೆಯ ವಿಷಯಕ್ಕೆ ಬಂದರೆ, ಭಾರತದ ಯುವಜನತೆಯ ಶಕ್ತಿಯ ಉಪಯೋಗದ ಪ್ರಮಾಣ ಕಡಿಮೆ. ಭಾರತದ ನಿರುದ್ಯೋಗದ ದರ 2012ರಂತೆ ಶೇ.8.3ರಷ್ಟಿದೆ.

ಇನ್ನು ಸಹಕಾರ ಕ್ಷೇತ್ರಕ್ಕೆ ಬಂದರೆ, ಯುವಜನತೆಯ ಭಾಗವಹಿಸುವಿಕೆಯ ಪ್ರಮಾಣ ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಸಹಕಾರ ಕ್ಷೇತ್ರ ತನ್ನ ಸಾಂಪ್ರದಾಯಿಕ ಪದ್ಧತಿಯಿಂದ ಆಚೆ ಬರದಿರುವುದು ಕೂಡ ಕಾರಣವಾಗಿರಬಹುದು. ಆದರೆ, ಯುವಜನತೆಯ ಭಾಗವಹಿಸುವಿಕೆಯ ನೂತನ ಆಯಾಮ ದೊರೆಯದೆ ಸಹಕಾರ ಕ್ಷೇತ್ರದ ಸಾಂಪ್ರದಾಯಿಕತೆ ದೂರವಾಗದು ಎನ್ನುವುದೂ ಸತ್ಯ. ಸಹಕಾರ ಕ್ಷೇತ್ರಕ್ಕೆ ಯುವಜನತೆಯನ್ನು ಸೆಳೆಯುವ ಪ್ರಯತ್ನವಾಗಿ 2011ರಲ್ಲಿ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯಲ್ಲಿ 'ಯುವಕ್ಷೇತ್ರ, ಸಹಕಾರ ರಂಗದ ಭವಿಷ್ಯ' ಎನ್ನುವ ಘೋಷವಾಕ್ಯದೊಂದಿಗೆ ಪ್ರಪಂಚದಾದ್ಯಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಭಾರತದಲ್ಲಿ ಈ ಪ್ರಯತ್ನ ಅಷ್ಟೊಂದು ಪರಿಣಾಮಕಾರಿಯಾಗಿಲ್ಲ.

ಸಹಕಾರ ವಿಷಯವನ್ನು ಶಿಕ್ಷಣದಲ್ಲಿ ಅಳವಡಿಸುವ ಮೂಲಕ ಯುವಕ್ಷೇತ್ರಕ್ಕೆ ತಲುಪಿಸುವ ಪ್ರಯತ್ನ ಕೂಡ ಭಾರತದಲ್ಲಿ ಕಡಿಮೆ ಎಂದೇ ಹೇಳಬಹುದು. ಇನ್ನು ಕರ್ನಾಟಕಕ್ಕೆ ಬಂದರೆ, ಮೈಸೂರು ವಿಶ್ವವಿದ್ಯಾಲಯದಲ್ಲಿ ಮಾತ್ರ 'ಸಹಕಾರ' ಒಂದು ವಿಷಯವಾಗಿ ಅಧ್ಯಯನದಲ್ಲಿದೆ. ಯುವಜನತೆಯಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಅರಿವು ಮೂಡಿಸುವ ಮೂಲಕ ಆಧುನಿಕತೆ, ಹೊಸತನಗಳನ್ನು ಸಹಕಾರ ಕ್ಷೇತ್ರಕ್ಕೆ ತರುವುದೇ ಅಲ್ಲದೆ, ನಿರುದ್ಯೋಗ ಸಮಸ್ಯೆಗೂ ಪರಿಹಾರ ಕಂಡುಕೊಳ್ಳಬಹುದು. ಈ ನಿಟ್ಟಿನಲ್ಲಿ ಸಹಕಾರ ರಂಗದಲ್ಲಿ ಹೆಜ್ಜೆಯಿಟ್ಟಿರುವ 'ನ್ಯಾಷನಲ್ ಯುವ ಕೋ ಆಪರೇಟೀವ್ ಸೊಸೈಟಿ ಲಿ., (ಎನ್‌ವೈಸಿಎಸ್) ಇದರ ವೆಬ್‌ತಾಣದ ಪರಿಚಯ ಇಲ್ಲಿದೆ.

**ವೆಬ್‌ತಾಣ 20 : http://www.yuvacooperative.com**

- ಬಡ, ಅನಕ್ಷರಸ್ತ, ನಿರುದ್ಯೋಗಿ ಯುವಜನತೆಗೆ ಆದಾಯ ಗಳಿಕೆಯ ಮಾರ್ಗ ಒದಗಿಸುವ ಮೂಲಕ ದೇಶದ ಅಭಿವೃದ್ಧಿಯ ಮುಖ್ಯ ಭೂಮಿಕೆಯಲ್ಲಿ ಅವರನ್ನು ತರುವ ಉದ್ದೇಶದಿಂದ 'ನೆಹರು ಯುವ ಕೇಂದ್ರ ಸಂಘಟನೆ'ಯ ಅಡಿಯಲ್ಲಿ ಭಾರತ ಸರ್ಕಾರದ 'ಯುತ್ ಅಫೇರ್ಸ್ & ಸ್ಪೋರ್ಟ್ಸ್ ಸಚಿವಾಲಯ' ಎನ್‌ವೈಸಿಎಸ್‌ನ್ನು ಹುಟ್ಟುಹಾಕಿದೆ. ಆಧುನಿಕ, ಶಕ್ತಿಯುತ ಹಾಗೂ ತಂತ್ರಜ್ಞಾನ ಭರಿತ ಭಾರತ – 'ಯುವ ಭಾರತ, ನವ ಭಾರತ' ಎನ್ನುವ ಘೋಷ ವಾಕ್ಯದೊಂದಿಗೆ ಇದು ಕಾರ್ಯನಿರ್ವಹಿಸುತ್ತಿದೆ.
- ಎನ್‌ವೈಸಿಎಸ್ ಇದರ ವೆಬ್‌ತಾಣದಲ್ಲಿ ಇದರ ಸ್ಥಾಪನೆಯ ಉದ್ದೇಶ, ಇದರ ದೃಷ್ಟಿಕೋನ, ಉಪವಿಧಿ, ಆಡಳಿತ ಮಂಡಳಿಯ ವಿವರ ಹಾಗೂ ಸಂಪರ್ಕ ಮಾಹಿತಿಗಳನ್ನು ಕಾಣಬಹುದು.
- ಭಾರತದಾದ್ಯಂತ ಇದು ಹೊಂದಿರುವ ಸಂಪರ್ಕ ಹಾಗೂ ಜಿಲ್ಲಾ ಪ್ರತಿನಿಧಿಗಳ ಪಟ್ಟಿ, ಇದರ ಕಾರ್ಯಚಟುವಟಿಕೆಗಳ ಮಾಹಿತಿ, ಕಾರ್ಯಕ್ರಮಗಳ ಚಿತ್ರಗಳನ್ನು ಈ ತಾಣದಲ್ಲಿ ನೋಡಬಹುದು.
- ಎನ್‌ವೈಸಿಎಸ್ ಕಾರ್ಯಚಟುವಟಿಕೆಯ ಸುದ್ದಿ ಸಮಾಚಾರಗಳು, ವಿವಿಧ ಕಾನ್ಫರೆನ್ಸ್‌ಗಳಲ್ಲಿ ಪ್ರಸ್ತುತ ಪಡಿಸಲಾದ ವರದಿಗಳು, 2012ರಲ್ಲಿ ಭೋಪಾಲ್‌ನಲ್ಲಿ ನಡೆದ 'ಯುವ ಎಕ್ಸ್‌ಪೊ' ಇದರ ಮಾಹಿತಿ ಹಾಗೂ ಮುಂದಿನ ಕಾರ್ಯಯೋಜನೆಗಳ ಮಾಹಿತಿಗಳನ್ನು ನೋಡಬಹುದು.
- ಯುವ ಸಹಕಾರದೊಂದಿಗೆ ಎನ್‌ವೈಸಿಎಸ್ ಮೂಲಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಕಾರ್ಯವನ್ನು ಕೂಡ ಮಾಡಲಾಗುತ್ತಿದೆ. 'ಭಾರತ ಪರಿಕ್ರಮ' ಎನ್ನುವ ವೆಬ್‌ತಾಣವನ್ನು ರೂಪಿಸುವ ಮೂಲಕ ಸೇವೆಯನ್ನು ಒದಗಿಸಲಾಗುತ್ತಿದೆ. ಇದರ ಮಾಹಿತಿಯನ್ನು ಈ ತಾಣದಿಂದ ಪಡೆಯಬಹುದು.
- ಎನ್‌ವೈಸಿಎಸ್ ಇದರ ಉಪವಿಭಾಗವಾಗಿ 'ಜನ ನಿಧಿ' ಎನ್ನುವ ಹಣಕಾಸು ಸಂಘಟನೆಯನ್ನು ಕೂಡ ರೂಪಿಸಲಾಗಿದೆ. ಇದು ದೇಶದ 20 ಕಡೆ ಶಾಖೆಗಳನ್ನು ಹೊಂದಿದ್ದು, ಹಣಕಾಸು ಸೇವೆಯನ್ನು ಒದಗಿಸುತ್ತಿದೆ. ಈ ಬಗ್ಗೆ ಮಾಹಿತಿಯನ್ನು ಈ ತಾಣದಿಂದ ಪಡೆಯಬಹುದು.

ಯಾವುದೇ ಕಾರ್ಯವನ್ನು ಸರ್ಕಾರ ಮಾಡಬೇಕು ಎನ್ನುವ ಭಾವನೆಯಿಂದ ಹೊರಬಂದು ಸಹಕಾರ ಮಾಡಬಲ್ಲದು ಎನ್ನುವುದನ್ನು ಸಾಧಿಸಿ ತೋರಿಸುವ ಯುವ ಪಡೆಯ ಅಗತ್ಯ ಸಹಕಾರ ಕ್ಷೇತ್ರಕ್ಕಿದೆ. ಈ ನಿಟ್ಟಿನಲ್ಲಿ ಯುವ ಸಂಘಟನೆಗಳನ್ನು ರೂಪಿಸುವ ಮಹತ್ವದ ಜವಾಬ್ದಾರಿ ಸಹಕಾರ ಕ್ಷೇತ್ರದಿಂದ ಆಗಬೇಕಿದೆ. ಕರ್ನಾಟಕದ ಸಹಕಾರ ಕ್ಷೇತ್ರಕ್ಕೆ ಯುವಜನತೆಯನ್ನು ಸೆಳೆಯುವ ಪ್ರಯತ್ನವಾಗಿ ಸೌಹಾರ್ದ ಸಹಕಾರ ಕ್ಷೇತ್ರದಿಂದ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಹಾಗೂ ಯುವಜನತೆಯಿಂದ ಇದಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ದೊರೆತಿರುವುದು ಆಶಾದಾಯಕ ಬೆಳವಣಿಗೆ. ಇಂತಹ ಪ್ರಯತ್ನಗಳು ಹೆಚ್ಚಾಗಬೇಕಿದ್ದು, ಸಹಕಾರ ಕ್ಷೇತ್ರ ಯುವ ಶಕ್ತಿಯಿಂದ ಹೊಸತನವನ್ನು ಕಂಡುಕೊಳ್ಳುವಂತಾಗಲಿ. ಜಯನಾಮ ಸಂವತ್ಸರ ಎಲ್ಲ ಕಾರ್ಯಗಳಿಗೂ ಸರ್ವರಿಗೂ ಜಯವನ್ನು ತರಲಿ. ಯುಗಾದಿಯ ಶುಭ ಹಾರೈಕೆಗಳು.

# ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳ ಕಾರ್ಯನಿರ್ವಹಣೆ - ಸಹಕಾರಿ ಸಂಘಗಳ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಸ್ಥೆಗಳಿಗಿಂತ ಉತ್ತಮ

(ಶ್ರೀ ನಾಗರಾಜುರವರು ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಹಾಗೂ ಸಹಕಾರ ವಿಭಾಗದಲ್ಲಿ ಸಹಕಾರ ವಿಷಯದ ಪ್ರಾಧ್ಯಾಪಕರಾಗಿರುವ ಡಾ.ವಿಶ್ವನಾಥ ಎ.ಆರ್. ಇವರ ಮಾರ್ಗದರ್ಶದಲ್ಲಿ "ಡಿಸೆಂಬರ 2012 ನಡೆಸಿದ ಸಂಶೋಧನಾತ್ಮಕ ಅಧ್ಯಯನ ವರದಿ "ಕರ್ನಾಟಕದ ಸಹಕಾರಿ ಕಾಯ್ದೆಗಳ ಚೌಕಟ್ಟು ಒಂದು ವಿಮರ್ಶೆ" ಇದರಲ್ಲಿಯ 1959ರ ಸಹಕಾರಿ ಸಂಘಗಳ ಕಾಯ್ದೆ ಮತ್ತು 1997ರ ಸೌಹಾರ್ದ ಸಹಕಾರಿ ಕಾಯ್ದೆಯ ತುಲನಾತ್ಮಕ ವಿಷಯಗಳ ಮುಖ್ಯಾಂಶಗಳನ್ನು ಒದುಗರ ಮಾಹಿತಿಗಾಗಿ ಪ್ರಕಟಿಸಲಾಗಿದೆ.)

ಸದಸ್ಯರ ಹಾಗು ಸಹಕಾರಿ ಸಂಸ್ಥೆಗಳ ಹಿತಕಾಪಾಡುವುದೇ ಸಹಕಾರಿ ಕಾಯ್ದೆಯ ಮುಖ್ಯ ಗುರಿಯಾಗಿರಬೇಕು. ಸದಸ್ಯ ಹಿತಕ್ಕೆ ಧಕ್ಕೆ ಬರುವಂತಿದ್ದರೆ ಅಂತಹ ಕಾನೂನು ಬದಲಾಗಲೇಬೇಕು. ಸದಸ್ಯರನ್ನು ಹೆಚ್ಚು ಸಕ್ರೀಯರನ್ನಾಗಿಸುವ ಸಹಕಾರಿ ಸಂಸ್ಥೆಗಳ ನಡುವೆ ಬಾಂಧವ್ಯ ಹೆಚ್ಚಿಸುವ ಸಧೃಡ ಮತ್ತು ಪಾರದರ್ಶಕ ಆಡಳಿತದ ಬಗ್ಗೆ ಜಾಗೃತಿಯಿರುವ ಸದಸ್ಯರ ಸಂಖ್ಯೆ ಹೆಚ್ಚಿಸಿದಲ್ಲಿ ಸರಕಾರದ ಹಾಗೂ ಕಾನೂನಿನ ಹತೋಟಿ ಕಡಿಮೆಯಾಗುತ್ತದೆ. ನಿಷ್ಕ್ರೀಯ ಸದಸ್ಯನಿಂದ ಸಹಕಾರಿ ಸಂಸ್ಥೆಯ ಅಭಿವೃದ್ಧಿ ಸಾಧ್ಯವಾಗುವುದಿಲ್ಲ.

ಸಹಕಾರ ಕ್ಷೇತ್ರವನ್ನು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕಾಗಿ ಸರಕಾರಗಳು ಉಪಯೋಗಿಸಲು ಪ್ರಾರಂಭಿಸಿದ ನಂತರ ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣಿಗಳ ಪ್ರವೇಶಕ್ಕೆ ಅವಕಾಶವಾಯಿತು.

ಇದರ ಪರಿಣಾಮವಾಗಿ ರಾಜಕಾರಣಿಗಳು ಸಹಕಾರ ಕ್ಷೇತ್ರವನ್ನು ತಮ್ಮ ಸ್ವಂತ ಹಿತಕ್ಕಾಗಿ ಬಳಸಿಕೊಳ್ಳುವುದು ಪ್ರಾರಂಭವಾಯಿತು. ಇದರಿಂದಾಗಿ ಸಹಕಾರ ಕ್ಷೇತ್ರದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಬೆಳೆಯಲು ಅವಕಾಶವಾಯಿತು. ಸಹಕಾರ ಕ್ಷೇತ್ರ ಈ ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ ಸಿಲುಕಿತು.

ರಾಷ್ಟ್ರ ವ್ಯಾಪಿ ಹರಡಿರುವ ಪಟ್ಟಭದ್ರ ಹಿತಾಸಕ್ತಿಗಳಿಂದ ಸಹಕಾರ ಕ್ಷೇತ್ರವನ್ನು ದೂರವಿಡಬೇಕೆಂದು 1968ರಲ್ಲಿ ಚನ್ನೈನಲ್ಲಿ ಮುಖ್ಯಮಂತ್ರಿಗಳ ಸಮ್ಮೇಳನ ನಡೆಯಿತು. ಸಹಕಾರಿ ಕಾಯ್ದೆಗಳಲ್ಲಿ ಬದಲಾವಣೆಗೆ ಅನುಮೋದಿಸಲಾಯಿತು. ಪರಿಣಾಮವಾಗಿ ಸರಕಾರದ ಹಸ್ತಕ್ಷೇಪ ಅತಿಯಾಯಿತು. ಸಹಕಾರ ಕ್ಷೇತ್ರ ನಿರೀಕ್ಷಿಸಿದ ಸಾಧನೆಮಾಡಲಾಗಲಿಲ್ಲ ಕಾರಣ ಸಹಕಾರ ಕ್ಷೇತ್ರಕ್ಕೆ ಸ್ವಾಯತ್ತತೆಯ ಅವಶ್ಯಕತೆ ಅಗತ್ಯವಾಗಿತ್ತು.

ಸಹಕಾರ ಕ್ಷೇತ್ರದಲ್ಲಿ ಸ್ವಾಯತ್ತತೆಯನ್ನು ಉಳಿಸಿಕೊಂಡರೆ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂಬ ತಿರ್ಮಾನಕ್ಕೆ ಬಂದನಂತರ 1991ರಲ್ಲಿ ಈ ದೇಶದ ಯೋಜನಾ ಆಯೋಗದವರು ಸರಕಾರದ ಪಾಲುಗಾರಿಕೆ ಕಡಿಮೆಯಿರುವ ಅಥವಾ ಇಲ್ಲದಿರುವ ಮಾದರಿ ಕಾಯ್ದೆ ರಚನೆ ಬಗ್ಗೆ ಒಲವು ಮೂಡಿತು.

ಸರಕಾರದ ಪಾಲುಗಾರಿಕೆ ಇರುವ ಸಹಕಾರ ಸಂಸ್ಥೆಗಳಿಗೊಂದು ಹಾಗು ಸರಕಾರದ ಪಾಲುಗಾರಿಕೆ ಇರದಿರುವ ಸಹಕಾರಿ ಸಂಸ್ಥೆಗಳಿಗಾಗಿ ಪ್ರತ್ಯೇಕ ಸಹಕಾರಿ ಕಾಯ್ದೆಯ ರಚನೆಗೆ ಚಿಂತನೆ ನಡೆಯಿತು. ಪರಿಣಾಮವಾಗಿ ಕರ್ನಾಟಕದಲ್ಲಿ 1997ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಅವಕಾಶವಾಯಿತು.

**ಕರ್ನಾಟಕ ರಾಜ್ಯದಲ್ಲಿ 1998ರಲ್ಲಿ ಸಹಕಾರಿ ನೀತಿ ರಚನೆಯಾಯಿತು. ಇದು ದೇಶದಲ್ಲಿಯೆ ಪ್ರಥಮ ಹಾಗೂ ಮಾದರಿ ಸಹಕಾರಿ ನೀತಿ. ಕರ್ನಾಟಕದ ಸಹಕಾರಿ ನೀತಿಯ ಪ್ರಮುಖ ಅಂಶಗಳು :**

1. ಸಹಕಾರಿ ಸಂಸ್ಥೆಗಳಿಗೆ ಸ್ವಾಯತ್ತತೆ, ಸ್ವಯಂ ಆಡಳಿತದ, ಸ್ವಯಂ ನಿಯಂತ್ರಣದ ಅವಕಾಶ.
2. ಸದಸ್ಯರ ಹಿತಕ್ಕಾಗಿ ಯಾವುದೆ ಕಾರ್ಯಚಟುವಟಿಕೆಗಳನ್ನು ಮಾಡಲು ಸ್ವಾತಂತ್ರ.
3. ಪ್ರಸಕ್ತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಯಲ್ಲಿ ಸರಕಾರದ ಕನಿಷ್ಠ ಪಾತ್ರ.
4. ಸಂಪೂರ್ಣ ಸ್ವಾಯತ್ತತೆಯನ್ನು ಬಯಸುವ ಸರಕಾರದ ಪಾಲುಗಾರಿಕೆಗೆ ಅವಕಾಶವಿರದಿರುವ ಪ್ರತ್ಯೇಕ ಸೌಹಾರ್ದ ಸಹಕಾರಿ ಕಾಯ್ದೆ ಜಾರಿ.

1997ರಲ್ಲಿ ಕಾಯ್ದೆಯಾಗಿ 2001ರಲ್ಲಿ ಜಾರಿಗೆ ಬಂದ ಸೌಹಾರ್ದ ಸಹಕಾರಿ ಕಾಯ್ದೆ ರಾಜ್ಯದಲ್ಲಿ ಕಳೆದ 12 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. 1959ರ ಸಹಕಾರಿ ಸಂಘಗಳ ಕಾಯ್ದೆ ಕಳೆದ 108 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದೆ. ಈ ಎರಡು ವ್ಯವಸ್ಥೆಗಳನ್ನು ಅಧ್ಯಯನಮಾಡಿದಾಗ ಈ ಕೆಳಕಂಡ ಮಹತ್ವದ ವಿಷಯಗಳು ಪ್ರಮುಖವಾಗಿವೆ. ಸಹಕಾರಿ ಸಂಸ್ಥೆಗಳ ಭೌತಿಕ (ವಾಸ್ತವಿಕತೆ) ಮತ್ತು ಹಣಕಾಸು ನಿರ್ವಹಣೆಯಲ್ಲಿ 1997ರ ಕಾಯ್ದೆಯ ಸೌಹಾರ್ದ ಸಹಕಾರಿಗಳು 1959ರ ಸಹಕಾರಿ ಸಂಸ್ಥೆಗಳಿಗಿಂತ ಉತ್ತಮ.

ಸಹಕಾರಿಗಳ ಬೆಳವಣಿಗೆ ಹಾಗೂ ಸದಸ್ಯತ್ವದ ದೃಷ್ಟಿಯಿಂದ 1997ರ ಕಾಯ್ದೆಯ ಸೌಹಾರ್ದ ಸಹಕಾರಿಗಳು 1959ರ ಸಹಕಾರಿ ಸಂಸ್ಥೆಗಳಿಗಿಂತ ಉತ್ತಮ. ಶೇರು ಬಂಡವಾಳ ಮತ್ತು ಕಾಯ್ದಿರಿಸಿದ ನಿಧಿ ನಿರ್ವಹಣೆಯಲ್ಲಿ ಸೌಹಾರ್ದ ಸಹಕಾರಿಗಳು ಸಕಾರಾತ್ಮವಾಗಿವೆ. 1959ರ ಸಹಕಾರಿ ಸಂಸ್ಥೆಗಳಲ್ಲಿ ಶೇರು ಬಂಡವಾಳ ಸಕಾರಾತ್ಮಕವಾಗಿದೆ ಆದರೆ ಕಾಯ್ದಿರಿಸಿದ ನಿಧಿಯ ನಿರ್ವಹಣೆ ನಕಾರಾತ್ಮಕವಾಗಿದೆ.

ಠೇವಣಿ ಮತ್ತು ದುಡಿಯುವ ಬಂಡವಾಳ ನಿರ್ವಹಣೆಯಲ್ಲಿ 1997ರ ಕಾಯ್ದೆಯ ಸೌಹಾರ್ದ ಸಹಕಾರಿಗಳು 1959ರ ಸಹಕಾರಿ ಸಂಸ್ಥೆಗಳಿಗಿಂತ ಮೇಲು. ಸಾಲಗಳ ನಿರ್ವಹಣೆಯಲ್ಲಿ 1997ರ ಕಾಯ್ದೆಯ ಸೌಹಾರ್ದ ಸಹಕಾರಿಗಳು 1959ರ ಸಹಕಾರಿ ಸಂಸ್ಥೆಗಳಿಗಿಂತ ಉತ್ತಮ ಸಾಧನೆ ಮಾಡಿದ್ದಾರೆ. ■

# ಸೌಹಾರ್ದ ಸಹಕಾರಿಗಳ ಕಾರ್ಯನಿರ್ವಾಹಕರು ಯಶಸ್ವಿಕಾರ್ಯನಿರ್ವಾಹಕರಾಗಲು ಮಾರ್ಗಸೂಚಿ

▸▸ **ಜಿ. ಎಸ್. ಟೋಪಣ್ಣವರ,** ವಿಭಾಗೀಯ ಅಧಿಕಾರಿ, ಬೆಳಗಾವಿ.

ಯಾವುದೇ ಸಹಕಾರಿ ಸಂಸ್ಥೆಯ ಅಭಿವೃದ್ಧಿ ಅದು ಆಡಳಿತ ಮಂಡಳಿಯ ಕ್ರಿಯಾಶೀಲ ಆಡಳಿತ ಹಾಗೂ ನಿರ್ದೇಶಕ ಮಂಡಳಿಯ ಉತ್ತಮ ನಾಯಕತ್ವ ಜೊತೆಗೆ ಕಾರ್ಯನಿರ್ವಹಕರ ಕಾರ್ಯ ಕುಶಲತೆ ಹಾಗು ನೌಕರರ ಸೇವಾ ಪದ್ಧತಿ ಮೇಲೆ ಅವಲಂಬಿಸಿರುತ್ತದೆ. ಕಾರ್ಯನಿರ್ವಹಕರುಗಳು ಶೈಕ್ಷಣಿಕವಾಗಿ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢವಾಗಿದ್ದಲ್ಲಿ ಹಾಗೂ ಅವಶ್ಯವಿದ್ದ ತರಬೇತಿಗಳನ್ನು ಹೊಂದಿದಲ್ಲಿ ಸಹಕಾರಿಯ ಕಾರ್ಯಚಟುವಟಿಕೆಗಳು ಉತ್ತಮವಾಗಿ ಮತ್ತು ರಭಸದಿಂದ ಜರುಗಲು ಸಾದ್ಯವಾಗುತ್ತದೆ. ಕಾರ್ಯನಿರ್ವಹಕರ ಹಾಗೂ ನೌಕರರ ಶೈಕ್ಷಣಿಕ ಅರ್ಹತೆ ಕೇವಲ ಸಹಕಾರಿಯಲ್ಲಿ ಸೇವೆ ಪಡೆಯಲು ಮೆಟ್ಟಲು ಮಾತ್ರವಾಗಿರುತ್ತದೆ. ಆದರೇ ಅದು ಎಲ್ಲವೂ ಅಗಲಾರದು. ಕಾರ್ಯನಿರ್ವಹಕರುಗಳು ತಮ್ಮ ಸೇವೆಯಲ್ಲಿ ಸಾಕಷ್ಟೂ ಅನುಭವಗಳನ್ನು ಪಡೆದಲ್ಲಿ ಸುಗಮವಾಗಿ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸಬಹುದಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತಾನು ಮಾಡುವ ಕೆಲಸದ ಜೊತೆಗೆ ಕೆಲಸದ ತರಬೇತಿಯನ್ನು ಸರಿಯಾದ ಪದ್ಧತಿಯಲ್ಲಿ ಸರಿಯಾದ ವೇಳೆ ಪಡೆಯಬೇಕಾಗುತ್ತದೆ. ಮನುಷ್ಯನು ಕಲಿತುಕೊಳ್ಳುವುದನ್ನು ಜೀವನ ದುದ್ದಕ್ಕು ಮಾಡಿದರೂ ಕಡಿಮೆಯೇ. "ಕ್ಷಣ ಕ್ಷಣ ಶಿಕ್ಷಣ – ನಿರಂತರ ಶಿಕ್ಷಣ ಎಂಬಂತೆ ಮನುಷ್ಯನು ಜೀವನ ಉದ್ದಕ್ಕೂ ಶಿಕ್ಷಣ ಪಡೆದರೂ ಶಿಕ್ಷಣವೂ ಮುಗಿಯದ ಅಧ್ಯಾಯ. ಕಲಿತುಕೊಳ್ಳುವುದನ್ನು ಮನುಷ್ಯನು ನೋಡುವು ದೊಂದಿಗೆ, ಕೇಳುವುದೊಂದಿಗೆ, ಪ್ರಯೋಗಮಾಡುವುದೊಂದಿಗೆ ಹಾಗೂ ತರಬೇತಿಯೊಂದಿಗೆ ಹೀಗೆ ಹಲವಾರು ರೀತಿಗಳಿಂದ ಪಡೆಯ ಬಹುದಾಗಿದೆ.

ಈ ಕೆಳಗಿನ ಕೆಲವು ಮಾರ್ಗಸೂಚಿಗಳನ್ನು ಅಳವಡಿಸಿದಲ್ಲಿ ಒಬ್ಬ ಯಶಸ್ವಿ ಕಾರ್ಯನಿರ್ವಾಹಕನೆನಿಸಿಕೊಳ್ಳಲು ಸಾಧ್ಯವಾಗುತ್ತದೆ.

1. ದೈನಂದಿಕ ಚಟುವಟಿಕೆಗಳನ್ನು ಸುಗಮವಾಗಿ ಪ್ರಾರಂಭಿಸಲು ಮನುಷ್ಯ ಮೊದಲು ಕ್ರಿಯಾಶೀಲ ಇರಬೇಕಾಗುತ್ತದೆ ಅದಕ್ಕೆ ದೈನಂದಿಕ ಆಸನ, ಪ್ರಾಣಾಯಮಗಳನ್ನು ಬೆಳ್ಳಿಗೆ ಮಾಡಬೇಕು ಮನುಷ್ಯನು ಬೇಗನೆ ಹಾಸಿಗೆಯಿಂದ ಏಳುವುದರಿಂದ ಅವನ ಜೀವನ ಗತಿಯು ಬದಲಾಗುತ್ತದೆ ಹಾಗೂ ಮನುಷ್ಯ ಜೀವನದಲ್ಲಿ ಎಲ್ಲ ತರಹದ ಪ್ರಗತಿಯನ್ನು ಸಾಧಿಸಬಹುದು.
2. ಪ್ರತಿಯೊಬ್ಬ ಕಾರ್ಯನಿರ್ವಹಕರು ತನ್ನ ಕಛೇರಿಯ ಕೆಲಸಕ್ಕೆ ಬರುವ ಮುಂಚೆ ತಾನು ಉತ್ತಮವಾಗಿ ಉಡುಪು ತೊಡಪು ಗಳನ್ನು ಧರಿಸಿ ಕೆಲಸದ ವೇಳೆಯ ಪ್ರಾರಂಭದ ಮುಂಚೆ ಕಛೇರಿಯಲ್ಲಿ ಹಾಜರಿರಬೇಕು. ಕಾರ್ಯನಿರ್ವಹಕರು ಈ ಪದ್ಧತಿ ಅಳವಡಿಸಿದಲ್ಲಿ ತನ್ನ ಸಹಪಾಠಿಗಳಿಗೆ ಅದು ಮಾರ್ಗದರ್ಶನವಾಗುತ್ತದೆ.
3. ಕಾರ್ಯನಿರ್ವಹಕರು ಸಹಕಾರಿಯ ಆಡಳಿತಕ್ಕೆ ಅನ್ವಯಿಸುವ ಎಲ್ಲ ಕಾಯ್ದೆ, ನಿಯಮ, ವ್ಯವಹಾರದ ನಿಯಮ, ಉಪವಿಧಿಗಳನ್ನು ಮೇಲಿಂದ ಮೇಲೆ ಸರಿಯಾಗಿ ಓದಿ ಅರಿತುಕೊಂಡಿರಬೇಕು. ಮೇಲಿಂದ ಮೇಲೆ ಆಗುವ ಬದಲಾವಣೆಗಳನ್ನು ಚೆನ್ನಾಗಿ ಅಭ್ಯಸಿಸಿ ತನ್ನ ಸಹಕಾರಿಯ ದೈನಂದಿಕ ಆಡಳಿತದಲ್ಲಿ ಅಳವಡಿಸಿಕೊಳ್ಳಬೇಕು. ಈ ಎಲ್ಲ ಕಾನೂನು ನಿಯಮ ಉಪವಿಧಿಗಳ ಬಗ್ಗೆ ಅರಿವನ್ನು ತನ್ನ ಎಲ್ಲ ಸಹಪಾಠಿಗಳಿಗೆ ನೀಡಬೇಕು.
4. ಆಡಳಿತ ಮಂಡಳಿಯ ಸಭೆಗಳಲ್ಲಿ ಕಾನೂನು, ನಿಯಮ, ಉಪವಿಧಿಗಳ ಹಾಗೂ ವ್ಯವಹಾರಗಳ ನಿಯಮಗಳ ಬಗ್ಗೆ ವಿವರವಾದ ಮಾಹಿತಿಗಳನ್ನು ನಿರ್ದೇಶಕ ಮಂಡಳಿಯ ಸದಸ್ಯರಿಗೆ ನೀಡಬೇಕು ಮತ್ತು ಅವುಗಳ ಮೇಲೆ ಸಂದರ್ಭನುಸಾರ ಸಭೆಗಳಲ್ಲಿ ಚರ್ಚಿಸಬೇಕು. ಕಾನೂನುದಲ್ಲಿ ಬದಲಾವಣೆಯಾದ ಉಪವಿಧಿಗಳಿಗೆ ಅವಶ್ಯಕ ಬದಲಾವಣೆಗಳನ್ನು ಅದಲ್ಲದೇ ಕಾನೂನು ಕಕ್ಷೆ ಒಳಗೆ ಸಹಕಾರಿಯ ವ್ಯವಹಾರಗಳನ್ನು ಬೆಳೆಸುವ ದೃಷ್ಟಿಯಿಂದ ಉಪವಿಧಿಗಳಲ್ಲಿ ಅವಶ್ಯಕ ತಿದ್ದುಪಡಿಗಳನ್ನು ಸೇರ್ಪಡೆ ಮಾಡಿಕೊಳ್ಳಬೇಕು.
5. ಗ್ರಾಹಕರ ಜೊತೆಗೆ ಸೌಜನ್ಯ ಪೂರಕವಾಗಿ ವರ್ತಿಸಬೇಕು ಅವರಿಗೆ ಅವರ ಸ್ಥಾನ ಮಾನ, ವಯಸ್ಸುಗಳ ಪ್ರಕಾರ ಗೌರವ, ಮಾನ ಮಾರ್ಯದೆಗಳನ್ನು ಕೊಡಬೇಕು.
6. ಗ್ರಾಹಕರ ಸೇವೆಗಳ ಅವಶ್ಯಕತೆಗಳನ್ನು ಅರಿತುಕೊಂಡು ಆಡಳಿತ ಮಂಡಳಿಯ ಜೊತೆಗೆ ಚರ್ಚಿಸಿ ಅವುಗಳನ್ನು ಗರಿಷ್ಠ ರೀತಿಯಲ್ಲಿ ವ್ಯವಹಾರ ಪದ್ಧತಿಯಲ್ಲಿ ಒದಗಿಸಬೇಕು.
7. ಗ್ರಾಹಕರ ತೊಂದರೆಗಳನ್ನು ಅನಾನುಕೂಲತೆಗಳನ್ನು ಅರಿತುಕೊಂಡು ವ್ಯವಹಾರಗಳ ಬೆಳವಣಿಗೆ ದೃಷ್ಟಿಯಿಂದ ಸಹಪಾಠಿಗಳ ಜೊತೆಗೆ ಚರ್ಚಿಸಿ ಅವುಗಳನ್ನು ನಿವಾರಿಸಲು ಅವಶ್ಯಕ ಕ್ರಮಗಳನ್ನು ಆಡಳಿತ ಮಂಡಳಿಯ ಜೊತೆಗೆ ಸಮಾಲೋಚನೆ ಜರುಗಿಸಿ ಕೈಕೊಳ್ಳಬೇಕು.
8. ಕಾರ್ಯನಿರ್ವಾಹಕನು ಸ್ಥಳಿಯ ಇತರ ಸಹಕಾರಿ ಸಂಸ್ಥೆಗಳ ಹಾಗೂ ಇತರ ಆರ್ಥಿಕ ಸಂಸ್ಥೆಗಳಲ್ಲಿ ಗ್ರಾಹಕರಿಗೆ ಕೊಡುವ ವಿವಿಧ ಸೇವೆಗಳ ಹಾಗೂ ಸೌಲಭ್ಯಗಳ ಬಗ್ಗೆ ಅಭ್ಯಸಿಸಿ ಸಹಕಾರಿಯ ವ್ಯವಹಾರಗಳನ್ನು ಅಭಿವೃದ್ಧಿಗೊಳಿಸುವ ದೃಷ್ಟಿಯಿಂದ ಸದರಿ ಸೇವೆಗಳನ್ನು ತನ್ನ ಸಹಕಾರಿಯಲ್ಲಿ ಕೊಡುವ ಸೇವೆಗಳು ಜೊತೆಗೆ ತುಲನಾತ್ಮಕವಾಗಿ ಪರಿಶೀಲಿಸಿ ತಮ್ಮ ಸಹಕಾರಿಯಲ್ಲಿಯ ಸೇವೆಗಳು ಹೆಚ್ಚು ಆಕರ್ಷಕವಾಗಿ ಜರುಗಲು ಅವಶ್ಯಕ ಕ್ರಮಗಳನ್ನು ಜರುಗಿಸಬೇಕು.
9. ಕೆಲಸದ ಹಾಗೂ ಅಭಿವೃದ್ದಿಪರ ವಿಷಯದಲ್ಲಿ ಆಡಳಿತ ಮಂಡಳಿಯ ಆಡಳಿತಾತ್ಮಕ ವಿಚಾರಗಳನ್ನು ಅರಿತುಕೊಂಡು ಸಹಕಾರಿಯನ್ನು ಇತರರ ನೌಕರರ ಜೊತೆಗೆ ನೌಕರರ ಸಭೆಯನ್ನು ಜರುಗಿಸಿ ಅವರ ವಿಚಾರಗಳನ್ನು ಹಾಗೂ ಅವರು ಹೊಂದಿದ ಸಹಕಾರಿಯ ವಿಷಯದಲ್ಲಿ ಪ್ರಗತಿ ಪರ ಸಲಹೆಗಳನ್ನು ತಿಳಿದುಕೊಂಡು ಕಾರ್ಯಗಳ ರೂಪರೇಷಗಳನ್ನು ತಯಾರಿಸಿ ಅಳವಡಿಸಿಕೋಳ್ಳಬೇಕು. ಸಹಕಾರಿಯಲ್ಲಿಯ ತಾನು ಹಾಗೂ

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

ತನ್ನ ಜೊತೆಗೆ ಇರುವ ಎಲ್ಲ ನೌಕರನು ಸಂಸ್ಥೆಯ ಶಿಸ್ತಿನ ಸಿಪಾಯಿಯಂತೆ ಇರುವ ಪರಿಪಾಠವನ್ನು ಅಚ್ಚುಕಟ್ಟಾಗಿ ಪಾಲಿಸಬೇಕು.

10. ಸಹಕಾರಿಯಲ್ಲಿ ಪ್ರತಿಯೊಬ್ಬ ನೌಕರನು ಸಹಕಾರಿಯ ವ್ಯವಹಾರದ ಪ್ರಗತಿಯ ಬಗ್ಗೆ ಅಲೋಚಿಸುವ ದೃಷ್ಟಿಯಲ್ಲಿ ಎಲ್ಲ ನೌಕರನು ವಿಶ್ವಾಸ ಅರ್ಹತೆಯಲ್ಲಿ ಪಡೆದುಕೊಂಡು ಸಮೂಹಿಕವಾಗಿ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬ ನೌಕರನು ಸಹಕಾರಿಯ ಬಗ್ಗೆ ಇರುವ ಕಳಕಳಿಯನ್ನು ಅರಿತು ಸದರಿ ಪ್ರವರ್ತಿಯನ್ನು ಬೆಳೆಯುವ ಹಾಗೇ ಕ್ರಮ ಕೈಕೊಳ್ಳಬೇಕು. ಪ್ರತಿಯೊಬ್ಬ ಸಹಪಾಠಿಯು ಸಹಕಾರಿಯ ಪ್ರಗತಿಗೆ ಸರಿಸಮಾನ ಜವಾಬ್ದಾರನು ಹಾಗೂ ಅದರ ಪ್ರಗತಿಗೆ ಕೊಡುಗೆಗೆ ವಂತಿಗೆದಾರನು ಎಂಬ ವ್ಯಾಖ್ಯಾನ ಪದ್ಧತಿಯನ್ನು ಸಹಕಾರಿಯು ಹೊಂದಬೇಕು ಈ ವಿಷಯದಲ್ಲಿ ಸಹಕಾರಿಯ ಪ್ರತಿಯೊಬ್ಬ ನೌಕರನು ಕಾರ್ಯೋನ್ಮುಖವಾಗಬೇಕು.

11. ಕಾರ್ಯನಿರ್ವಹಕನು ಸಹಕಾರಿಯಲ್ಲಿಯ ಸೇವೆಯ ಹಿರಿಮೆ (Dignity) ಹಾಗೂ ಹೆಮ್ಮೆ (proud)ವನ್ನು ಹೊಂದಬೇಕು ತಾನು ಪಡೆಯುವ ಸಂಬಳ ಹಾಗೂ ಇತರ ಸೌಲಭ್ಯಗಳ ತಾರತಮ್ಯಗಳ ಪರಿಗಣನೆ ಬಗ್ಗೆ ಹೆಚ್ಚಿನ ಅಧ್ಯತೆಯನ್ನು ಕೊಡಬಾರದು ಸಹಕಾರಿಯು ಅಭಿವೃದ್ಧಿಹೊಂದಿದರೆ ತಮ್ಮ ಅಭಿವೃದ್ಧಿಯು ಸಾಧ್ಯ ಎಂಬ ವಿಷಯವನ್ನು ನೌಕರರು ಅರಿತುಕೊಳ್ಳಬೇಕು.

12. ಕಾರ್ಯನಿರ್ವಹಕನು ತನ್ನ ಕಾರ್ಯದಲ್ಲಿ ಎಲ್ಲ ಸಹಪಾಠಿಗಳ ಜೊತೆಗೆ ವಿನಮ್ರ ರಿತಿಯಲ್ಲಿ ವರ್ತಿಸಿ ತನಗೆ ಇರುವ ಅಧಿಕಾರ ಹಾಗೂ ಅವಕಾಶಗಳ ಮೀತಿಯಲ್ಲಿ ಅವರು ಮಾಡುವ ಕೆಲಸ ಕಾರ್ಯಗಳನ್ನು ವಿಕ್ಷೀಸಿಬೇಕು. ತಪ್ಪು ಮಾಡುವ ಸಹಪಾಠಿಗಳಿಗೆ ಅವರ ತಪ್ಪುಗಳ ಬಗ್ಗೆ ಅರಿವುಗಳನ್ನು ಮುಡಿಸುವ ಪದ್ಧತಿಯಲ್ಲಿ ಅವರಿಗೆ ತಿಳುವಳಿಕೆ ಕೊಟ್ಟು ಸರಿಪಡಿಸಿಕೊಳ್ಳಬೇಕು. ಸಹಪಾಠಿಗಳಿಗೆ ಉತ್ತಮವಾಗಿ ಕೆಲಸ ಮಾಡಲು ಅವರಿಗೆ ಎಲ್ಲ ತರಹದ ಸ್ಪೂರ್ತಿಗಳನ್ನು ಕೊಡಬೇಕು. ಅವರಲ್ಲಿ ಉತ್ತಮ ಕೆಲಸ ಮಾಡುವ ಮನೋಧೈರ್ಯವನ್ನು ನಿರ್ಮಿಸುವ ಕಾರ್ಯವನ್ನು ಮಾಡಬೇಕು.

13. ಉತ್ತಮ ಕೆಲಸ ಮಾಡುವ ನೌಕರರಿಗೆ ಅವರು ಮಾಡುವ ಕೆಲಸಗಳಿಗೆ ಪ್ರೋತ್ಸಾಹ ಕೊಡಬೇಕು ಹಾಗೂ ಅವರು ಮಾಡಿದ ಕೆಲಸಗಳಿಗೆ ಆಡಳಿತ ಮಂಡಳಿಯಿಂದ ಪ್ರಶಸ್ತಿಗಳನ್ನು ಮತ್ತು ನಿಯಮಗಳ ಮೀತಿಯೊಳಗೆ ಸೌಲಭ್ಯಗಳನ್ನು ಕೊಡಿಸುವ ವ್ಯವಸ್ಥೆಯನ್ನು ಹೊಂದಬೇಕು. ನೌಕರರು ಹೊಂದಿದ ಕೆಲಸದ ಆಸಕ್ತಿಗಳನ್ನು ತಿಳಿದುಕೊಂಡು ಅವರಿಗೆ ಸರಿಹೊಂದುವ ಹಾಗೂ ಅವರು ಹೆಚ್ಚಿಗೆ ಕ್ರಿಯಾಶೀಲರಾಗಿ ಕೆಲಸ ಮಾಡಬಲ್ಲ ಕೆಲಸಗಳನ್ನು ಅವರಿಗೆ ವಹಿಸಿ ಅವರಿಂದ ಸಂಸ್ಥೆಗೆ ಹೆಚ್ಚಿನ ಸೇವೆ ಪಡೆಯುವ ವ್ಯವಸ್ಥೆಯನ್ನು ಹೊಂದಬೇಕು.

14. ಸಹಪಾಠಿಗಳು ಇಚ್ಚಿಸಿದಲ್ಲಿ ಅವರಿಗೆ ಹೆಚ್ಚಿನ ಶಿಕ್ಷಣ ಪಡೆಯಲು ಅವಕಾಶ ಮಾಡಿಕೊಡಬೇಕು. ಅದಲ್ಲದೇ ಸಹಕಾರಿಯಲ್ಲಿ ಕೆಲಸದ ವಿಷಯದಲ್ಲಿ ಅವರ ಕುಶಲತೆಯನ್ನು ಬೆಳೆಸುವ ದೃಷ್ಠಿಯಿಂದ ಸಂಯುಕ್ತ ಸಹಕಾರಿಯು ಹಾಗೂ ಇತರ ಬೇರೆ ಬೇರೆ ವೃತ್ತಿಪರ ಶಿಕ್ಷಣ ಕೊಡುವ ಸಂಸ್ಥೆಗಳಿಂದ ಅವರಿಗೆ ಅವಶ್ಯಕ ತರಬೇತಿಗಳನ್ನು ವೇಳೆಗೆ ಸರಿಯಾಗಿ ಪರಿಪೂರ್ಣವಾಗಿ ಸಹಕಾರಿಯ ವೆಚ್ಚದಲ್ಲಿ ಕೊಡಿಸುವ ವ್ಯವಸ್ಥೆಯನ್ನು ಮಾಡಬೇಕು.

15. ಮನುಷ್ಯನು ಸಂಘಜೀವಿ ಆಗೀರುವಾಗ ಸಹಕಾರಿಯ ಪ್ರತಿಯೊಬ್ಬ ನೌಕರನು ಸಹಕಾರಿಯಲ್ಲಿ ಇರುವ ಎಲ್ಲ ತರಹದ ಸದಸ್ಯ ಗ್ರಾಹಕರಿಗೆ ಅವರವರ ಅಚಾರ ವಿಚಾರ ಸಲಹೆ ಸೂಚನೆಗಳನ್ನು ತಿಳಿದುಕೊಂಡು ಅವರ ಸಂಪರ್ಕದ ಜೊತೆಗೆ ಸಹಕಾರಿಯ ಸೇವೆಯನ್ನು ಒದಗಿಸಬೇಕಾಗುತ್ತದೆ. ಗ್ರಾಹಕರು ಒಳ್ಳೆಯ, ಕೆಟ್ಟ ವಿಚಾರದವರು, ವಯಸ್ಸಿಯಲ್ಲಿ ಚಿಕ್ಕವರು ಹಾಗೂ ವಯಸ್ಕರು, ಹೀತಚಿಂತಕರು ಇರುವವರು ಹಾಗೂ ತೊಂದರೆ ಕೊಡುವವರು ಸಹ ಇರುವರು ಹೀಗಿರುವಾಗ ಎಲ್ಲರ ಜೊತೆಗೆ ಸಹಕಾರಿಯ ಕಾರ್ಯನಿರ್ವಹಕರು ಮಧುರ ಭಾಂಧ್ಯವವನ್ನು ಹೊಂದಿ ತನಗೀರುವ ಅಧಿಕಾರ, ಆಡಳಿತ ಮಂಡಳಿಯ ಆಡಳಿತಾತ್ಮಕ ನೀತಿ ನಿಯಮಗಳ ಮೀತಿಯೊಳಗೆ, ಕಾನೂನು ಕಕ್ಷೆಯೊಳಗೆ ಸೇವೆಯನ್ನು ಒದಗಿಸಬೇಕಾಗುತ್ತದೆ. ಕಾರ್ಯನಿರ್ವಹಕರು ಸದಸ್ಯರಿಗೆ ಉತ್ತಮ ಸೇವೆ ಕೊಡುವ ಅದರ ಜೊತೆಗೆ ಸಹಕಾರಿಯ ಬೆಳವಣಿಗೆಯನ್ನು ಮಾಡುವ ಪರಮ ಜವಾಬ್ದಾರಿಯನ್ನು ಹೊಂದಿದ್ದರಿಂದ ಅವನ ಕಾರ್ಯಪದ್ಧತಿಯು ಸೂಕ್ಷ್ಮವಾದದ್ದು ಅಷ್ಟೇ ಮಹತ್ವದ್ದು ಆಗಿರುತ್ತದೆ. ಇದನ್ನು ಅರಿತುಕೊಂಡು ಕಾರ್ಯನಿರ್ವಹಕರುಗಳು ಸೇವೆ ಸಲ್ಲಿಸಬೇಕಾಗುತ್ತದೆ. ■

## ದಾನಗಳಲ್ಲಿ ಮತದಾನ ಶ್ರೇಷ್ಠ

ಜೀವನದ ಸಾರ್ಥಕತೆಗೆ, ಪುಣ್ಯ ಸಂಪಾದನೆಗೆ, ಪಾಪ ಪರಿಹಾರಕ್ಕೆ, ದೋಷ ನಿವಾರಣೆಗೆ ಹಾಗೂ ಪ್ರಾಯಸ್ಚಿತ್ತಕ್ಕಾಗಿ ಜನರು ಅನೇಕ ವಿಧವಾದ ದಾನಗಳನ್ನು ಮಾಡಬೇಕಾಗುತ್ತದೆ. ಅವುಗಳಲ್ಲಿ ಅನ್ನದಾನ – ವಸ್ತ್ರದಾನ – ಗೋದಾನ – ಭೂದಾನ – ವಿದ್ಯಾದಾನ – ಸುವರ್ಣದಾನ – ರಜತದಾನ – ರಕ್ತದಾನ – ನೇತ್ರದಾನ – ವಾಕ್ದಾನ ಮುಂತಾದವುಗಳು ಮಹತ್ವವನ್ನು ಪಡೆದಿವೆ. ಇವೆಲ್ಲವುಗಳಿಗಿಂತ ಮಿಗಿಲಾದ ಅತ್ಯಂತ ಮಹತ್ವದ ದಾನವೊಂದಿದೆ. ಅದುವೇ "ಮತದಾನ" ಸಮಾಜ ಋಣ ತೀರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ದೇಶದ ಅಭಿವೃದ್ಧಿಗಾಗಿ ಒಳಿತಿಗಾಗಿ ಮತದಾನ ಮಾಡದೆ ಇರುವುದು ನಮ್ಮ ಕರ್ತವ್ಯದಲ್ಲಿ ಲೋಪವೆಸಗಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರು ತಮ್ಮ ಪಾಲಿನ ಕರ್ತವ್ಯವನ್ನು ಮತದಾನ ಮಾಡುವುದರ ಮೂಲಕ ನಿರ್ವಹಿಸಿದಲ್ಲಿ ಪ್ರಜ್ಞಾವಂತ ಪ್ರಜೆ ಎನಿಸಿಕೊಳ್ಳಬಹುದು.




ಬೆಳಗಾವಿ ವಿಭಾಗೀಯ ಕಛೇರಿ ವಿಳಾಸ : ನಂ. 436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ – 1, ದೂ. 0831–2401551.
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222, ಮೊ. 9900990268.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010